**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು ನಗರ ಜಿಲ್ಲೆ, ರಾಜರಾಜೇಶ್ವರಿ ನಗರ,**
**ಬೆಂಗಳೂರು 98.**
**ವೆಬ್ ಆಧಾರಿತ ಇಂಡಕ್ಷನ್ ತರಬೇತಿ**

**ಅಧ್ಯಾಯ: 1. ಡಯಟ್‌ನ ಪಾತ್ರ ಮತ್ತು ಕಾರ್ಯಗಳು**

ಚಟುವಟಿಕೆ:1 **ಬೆಂಗಳೂರು ನಗರ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಶೈಕ್ಷಣಿಕ ಗುಣಮಟ್ಟವನ್ನು ಸುಧಾರಿಸಲು ಕಾರ್ಯನಿರ್ವಹಿಸುತ್ತಿರುವ ಸರ್ಕಾರೇತರ ಸಂಸ್ಥೆಗಳ ಪಟ್ಟಿ**

| ಕ್ರಮ. ಸಂಖ್ಯೆ | ಸರ್ಕಾರೇತರ ಸಂಸ್ಥೆಯ ಹೆಸರು | ನಿರ್ವಹಿಸುತ್ತಿರುವ ಕಾರ್ಯಗಳು |
|---|---|---|
| 1 | ಅಕ್ಷರ ಪ್ರತಿಷ್ಠಾನ | ಓದುವ ಕಾರ್ಯಕ್ರಮ<br>ನಗುನಗುತ ಗಣಿತ<br>ಲೈಬ್ರರಿ<br>ಬಾಲವಾಡಿ |
| 2 | ಅಜೀಂ ಪ್ರೇಮ್‌ಜಿ ಸಂಸ್ಥೆ | 1.ಕಲಿಕಾ ಖಾತ್ರಿ ಕಾರ್ಯಕ್ರಮ<br>2.ಶೈಕ್ಷಣಿಕ ನಿರ್ವಹಣೆ<br>3. ಶಿಕ್ಷಣದಲ್ಲಿ ತಂತ್ರಜ್ಞಾನದ ಬಳಕೆ<br>4.**Child friendly school** |
| 3. | ಪ್ರಜಾಯತ್ನ | ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದಲ್ಲಿಸಮುದಾಯದಸಹಭಾಗಿತ್ವದೊಂದಿಗೆ ಶೈಕ್ಷಣಿಕ ಸುಧಾರಣೆಗೆ ಪ್ರಯತ್ನಿಸುತ್ತಿದೆ. |
| 4 | ಆಕಾಂಕ್ಷ | ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಬಳಸಲಾಗಿರುವ ಕಂಪ್ಯೂಟರ್‌ಗಳನ್ನು ಬೆಂಗಳೂರು ನಗರದ ಸರ್ಕಾರಿ ಶಾಲೆಗಳ ಮಕ್ಕಳಿಗೆ ಒದಗಿಸಿ ಕಂಪ್ಯೂಟರ್ ಜ್ಞಾನವನ್ನು ನೀಡುತ್ತಿದ್ದಾರೆ. |
| 5 | **APSO(ASSOCATION FOR PROMOTING SOCIAL ACTION)** | ಕೊಳಚೆ–ಪ್ರದೇಶದಲ್ಲಿ ವಾಸಿಸುವಂತಹ ಶಾಲಾ ಮಕ್ಕಳು ಶಾಲೆಯಿಂದ ಹೊರಗೆ ಉಳಿಯದಂತೆ ಹಾಗೂ ಬಾಲ ಕಾರ್ಮಿಕರಾಗಿ ದುಡಿಯದಂತೆ ತಡೆಯಲು ಕಾರ್ಯಮಾಡುತ್ತಿದೆ. |
| 6 | ಅಶ್ವಿನಿ ಚಾರಿಟೆಬಲ್ ಟ್ರಸ್ಟ್(**ACT**) | ಶೈಕ್ಷಣಿಕವಾಗಿ ಪ್ರಗತಿಯಲ್ಲಿದ್ದು ಆರ್ಥಿಕವಾಗಿ ಹಿಂದುಳಿದಿರುವ ಮಕ್ಕಳನ್ನು ಗುರುತಿಸಿ ಅವರಿಗೆ ಆರ್ಥಿಕ ನೆರವು ನೀಡಿ ಶಾಲಾ ಸಮಯದ ನಂತರ ಹೆಚ್ಚುವರಿ ತರಗತಿಗಳನ್ನು ನಡೆಸುತ್ತಿದ್ದಾರೆ. |
| 7 | ಬಾಲವಿಹಾರ | ಕೆಳ ಮಧ್ಯಮ ವರ್ಗದ ಮಕ್ಕಳಿಗೆ ಚಟುವಟಿಕೆ ಆಧಾರಿತ ಅನೌಪಚಾರಿಕ ಶಿಕ್ಷಣವನ್ನು ಕಲ್ಪಿಸುತ್ತಿದ್ದಾರೆ.(ಯೋಗ, ಚಿತ್ರಕಲೆ, ಮಣ್ಣಿನ ಕಲಾಕೃತಿಗಳ ರಚನೆ ಇತ್ಯಾದಿ) |
| 8 | ಆಶಾ ಮತ್ತು ಶಿಕ್ಷಣ | ಕರ್ನಾಟಕ ಶಾಲಾ ದತ್ತು ಯೋಜನೆಯಡಿ ಈ ಸಂಸ್ಥೆಯವರು ಚಂದ್ರಾನಗರ ಮತ್ತು ಕುಮಾರಸ್ವಾಮಿ ಲೇಔಟ್ ನಲ್ಲಿ ಎರಡು ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ವಿದ್ಯಾರ್ಥಿಗಳಿಗೆ (**First generation learners**)ಶೈಕ್ಷಣಿಕಪ್ರಗತಿ ಸಾಧಿಸಲು ಸಹಕರಿಸುತ್ತಿದ್ದಾರೆ. |
| 9 | **CWC(Concern for** | ಅನಾಥ ಮಕ್ಕಳು , ಬಡ ಮಕ್ಕಳು ಇಂತಹ ಮಕ್ಕಳಿಗೆ ಔಪಚಾರಿಕ ಶಿಕ್ಷಣದ |

| | | |
|---|---|---|
| | working children) | ಜೊತೆಗೆ ವೃತ್ತಿಪರ ಮಾರ್ಗದರ್ಶನವನ್ನು ನೀಡುತ್ತಿದ್ದಾರೆ. |
| 10 | Software professional organisation | ಈ ಸಂಸ್ಥೆಯವರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಜೀವನಭಿಮಾನಗರ, ಈ ಶಾಲೆಯಲ್ಲಿ ಕಂಪ್ಯೂಟರ್ ಗಳನ್ನು ಅಳವಡಿಸಿ ಗ್ರಂಥಾಲಯಕ್ಕೆ ಹೆಚ್ಚಿನ ಪುಸ್ತಕಗಳನ್ನು ನೀಡಿ ವಿದ್ಯಾರ್ಥಿಗಳ ಸ್ವಯಂ ಓದುವಿಕೆಗೆ ಸಹಕಾರಿಯಾಗಿದ್ದಾರೆ. |
| 11 | ಪರಿಕ್ರಮ | ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ಬೆಂಗಳೂರು ನಗರದಲ್ಲಿ ಎರಡು ಶಾಲೆಗಳನ್ನು ನಡೆಸುತ್ತಿದ್ದಾರೆ. ಉತ್ತಮವಾದ ಶಿಕ್ಷಣ ಮತ್ತು ಆರೋಗ್ಯಕ್ಕೆ ಮಹತ್ವವನ್ನು ನೀಡಿದ್ದಾರೆ. |
| 12 | ಪ್ರಸನ್ನ ಜ್ಯೋತಿ- ಕೊತ್ತನೂರು | ಈ ಸಂಸ್ಥೆಯು ಮಾರ್ಚಿ 2003 ರಂದು ಪ್ರಾರಂಭವಾಯಿತು. ಈ ಸಂಸ್ಥೆಯಲ್ಲಿ ಆರ್ಥಿಕವಾಗಿ ಹಿಂದುಳಿದ 3 ರಿಂದ 18 ವರ್ಷದ ಹೆಣ್ಣುಮಕ್ಕಳಿಗೆ ವಸತಿ ಸಹಿತ ಶಾಲೆಗಳನ್ನು ನಡೆಸುತ್ತಿದ್ದಾರೆ. |
| 13 | ಸಮೂಹ | ಬೀಜಗಣಿತದ ಕಿಟ್ ಗಳನ್ನು ಶಾಲೆಗಳಿಗೆ ಉಪಯೋಗಿಸುವ ಮಾರ್ಗದರ್ಶನದೊಂದಿಗೆ ನೀಡಿ ಇದರ ಬಗ್ಗೆ ಶಿಕ್ಷಕರಿಗೂ ತರಬೇತಿಯನ್ನು ನೀಡಿ ನಂತರ ಶಿಕ್ಷಕರಿಂದ ಹಿಮ್ಮಾಹಿತಿಯನ್ನು ಪಡೆದು ಪರಿಶೀಲಿಸುತ್ತಾರೆ. |
| 14 | ಸೇವಾಭಾರತಿ-ಉಲ್ಲಾಳು ಉಪನಗರ | ಉಲ್ಲಾಳು ಉಪನಗರದಲ್ಲಿ ವಾಸಿಸುವ ಅತಿ ಬಡತನದ ಕುಟುಂಬದ ಮಕ್ಕಳಿಗೆ 7ನೇ ತರಗತಿಯವರೆಗೆ ಶಾಲೆಯನ್ನು ಪ್ರಾರಂಭಿಸಿ ಮಕ್ಕಳಿಗೆ ಆರೋಗ್ಯ ತಪಾಸಣೆಯನ್ನು ವೈದ್ಯರ ಮೂಲಕ ಮಾಡಿಸುತ್ತಾರೆ. |
| 15 | ಶಿಕ್ಷಣ | ಸರ್ಕಾರಿ ಶಾಲೆಗಳಲ್ಲಿ ಅತಿ ಬಡತನವಿರುವ ಮಕ್ಕಳಿಗೆ ಎಲ್ಲಾ ರೀತಿಯ ಶೈಕ್ಷಣಿಕ ಪ್ರೋತ್ಸಾಹಗಳನ್ನು ನೀಡಿ ಕಲಿಕಾ ಸಾಮಗ್ರಿಗಳನ್ನು ಒದಗಿಸುತ್ತಿದ್ದಾರೆ. |
| 16 | ಸೀತ | ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಅವರಿಗೆ ಮುಕ್ತವಾದ ವಾತಾವರಣದಲ್ಲಿ ಔಪಚಾರಿಕ ಶಿಕ್ಷಣವನ್ನು ನೀಡುತ್ತಿದ್ದಾರೆ. |
| 17 | SO CARE | ಜೈಲು ಶಿಕ್ಷೆ ಅನುಭವಿಸಿ ಹೊರಬಂದ ಪೋಷಕರ ಮಕ್ಕಳನ್ನು ಗುರುತಿಸಿ ತಾವೇ ಒಂದು ವಸತಿಗೃಹವನ್ನು ನಡೆಸಿ ಮಕ್ಕಳನ್ನು ಶಾಲೆಗಳಿಗೆ ಕಳುಹಿಸುತ್ತಿದ್ದಾರೆ.(Child Home) |
| 18 | ಶ್ರೀ ನಿತ್ಯಾನಂದ ಸ್ವಾಮಿ ಎಜುಕೇಷನ್ ಟ್ರಸ್ಟ್ ಆನೇಕಲ್ | ಜಿಗಣಿ ಗ್ರಾಮದಲ್ಲಿ ಆರ್ಥಿಕವಾಗಿ ಹಿಂದುಳಿದ ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಸಹಾಯ ಮಾಡುತ್ತಿದ್ದಾರೆ. |
| 19 | ಸುಕೃಪ | ಕೊಳಚೆ ಪ್ರದೇಶದ ಮಕ್ಕಳಿಗೆ ಬಾಲವಾಡಿಗಳನ್ನು ಪ್ರಾರಂಭಿಸಿ ಇಲ್ಲಿ ಮಕ್ಕಳಿಗೆ ವಿವಿಧ ಕ್ರೀಡೆಗಳು, ಉತ್ತಮವಾದ ಆರೋಗ್ಯವನ್ನು ಕಲ್ಪಿಸಿ ಮಕ್ಕಳನ್ನು ಶಾಲೆಗೆ ಕಳುಹಿಸಿ ಅವರೊಂದಿಗೆ ನಿಕಟ ಸಂಬಂದವನ್ನು ಹೊಂದಿರುತ್ತಾರೆ. |
| 20 | ಸುಮಂಗಲಿ ಸೇವಾಶ್ರಮ | ಅವಶ್ಯಕತೆಯಿರುವ ಶಾಲಾ ವಯಸ್ಸಿನ ಮಕ್ಕಳಿಗೆ ವಸತಿಸಹಿತ ಶಿಕ್ಷಣ ನೀಡುತ್ತಿದೆ. |
| 21 | ಸೂತ್ರದಾರ | ಶಾಲೆಗಳಲ್ಲಿ ಮಕ್ಕಳಿಗೆ ಹೊಸ ಹೊಸ ಆವಿಷ್ಕಾರಗಳನ್ನು ಮಾಡಲು ಉತ್ತೇಜಿಸುವುದಕ್ಕೆ ಪ್ರಾರಂಭಿಸಲಾದ ಸಂಪನ್ಮೂಲ ಕೇಂದ್ರ. |
| 22 | ಸ್ವಾಮಿ ವಿವೇಕಾನಂದ ಎಜುಕೇಶನ್ ಸೊಸೈಟಿ | ಬಡ ವಿದ್ಯಾರ್ಥಿಗಳಿಗೆ ಶಾಲೆಯನ್ನು ಪ್ರಾರಂಭಿಸಿ ಊಟದ ಸಹಿತ ಶಿಕ್ಷಣ ನೀಡುತ್ತಿದ್ದಾರೆ. |
| 23 | ಮಲ್ಲೇಶ್ವರಂ ಶಿಶುವಿಹಾರ | ನಗರದಲ್ಲಿರುವ ಬಡ ಮಕ್ಕಳಿಗೆ ಶಾಲೆಯನ್ನು ನಡೆಸುತ್ತಿದ್ದಾರೆ. |

# *ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು ನಗರ ಜಿಲ್ಲೆ, ರಾಜರಾಜೇಶ್ವರಿ ನಗರ ಬೆಂಗಳೂರು 98.*

**ಚಟುವಟಿಕೆ.2**

## I ಸೇವಾ ಪೂರ್ವ ಹಾಗೂ ಸೇವಾನಿರತ ತರಬೇತಿಗಳಲ್ಲಿ ಗುಣಾತ್ಮಕತೆಯನ್ನು ತರಲು ಡಯಟ್ ನ ಏಳು ವಿಭಾಗಗಳ ಸಹಭಾಗಿತ್ವ.

**ಸೇವಾ ಪೂರ್ವ ತರಬೇತಿ :**

ಸೇವಾ ಪೂರ್ವ ತರಬೇತಿಯ ಕಾರ್ಯಚಟುವಟಿಕೆಗಳು ಯಶ್ವಸಿಯಾಗಿ ನಡೆಯಬೇಕಾದರೆ ಡಯಟ್ ನಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವಿಭಾಗಗಳು ಪರಸ್ಪರ ಸಹಕಾರ ನೀಡಿದಾಗ ಮಾತ್ರ ಯಶ್ವಸಿಯಾಗಿ ಸಾಗಲು ಸಾಧ್ಯವಾಗುತ್ತದೆ, ಸೇವಾ ಪೂರ್ವ ತರಬೇತಿ ವಿಭಾಗಕ್ಕೆ ಡಯಟ್ ನ ಇತರೆ ವಿಭಾಗಗಳು ಈ ಕೆಳಕಂಡಂತೆ ಸಹಕಾರವನ್ನು ನೀಡುತ್ತಿವೆ.

1. ಶೈಕ್ಷಣಿಕ ತಂತ್ರಜ್ಞಾನ ವಿಭಾಗದಿಂದ ಪ್ರಶಿಕ್ಷಣಾರ್ಥಿಗಳಿಗೆ ಕಂಪ್ಯೂಟರ್ ತರಬೇತಿಯನ್ನು ಮೈಕ್ರೊಸಾಫ್ಟ್ ಮತ್ತು ಇಂಟೆಲ್ ಸಂಸ್ಥೆಯ ಮೂಲಕ ನೀಡಲಾಗಿದೆ.
2. ಪ್ರಶಿಕ್ಷಕರು ಪಾಠ ಬೋಧನೆಯಲ್ಲಿ ಕಂಪ್ಯೂಟರ್ ತಂತ್ರಜ್ಞಾನವನ್ನು Power Point Presentation ಮೂಲಕ ಪ್ರಶಿಕ್ಷಣಾರ್ಥಿಗಳು ಸಹ ತಮ್ಮ ಬೋದನೆಯಲ್ಲಿ ತಂತ್ರಜ್ಞಾನವನ್ನು ಬಳಸಿಕೊಳ್ಳುವಂತೆ ತರಬೇತಿಯನ್ನು ನೀಡಲಾಗುತ್ತಿದೆ.
3. ಜಿಲ್ಲಾ ಸಂಪನ್ಮೂಲ ಘಟಕದ ವತಿಯಿಂದ ನಡೆಸಲಾಗುವ ಅನೌಪಚಾರಿಕ ಶಿಕ್ಷಣ ಹಾಗೂ ಹದಿಹರೆಯದ ಶಿಕ್ಷಣಕ್ಕೆ ಸಂಬಂದಿಸಿದಂತೆ ತರಬೇತಿ ಸಾಹಿತ್ಯಗಳನ್ನು ಪ್ರಶಿಕ್ಷಣಾರ್ಥಿಗಳು ತಮ್ಮ ನಿಯೋಜಿತ ಕಾರ್ಯಕ್ಕೆ ಬಳಕೆ ಮಾಡಿಕೊಳ್ಳುತ್ತಾರೆ.
4. ಜಿಲ್ಲಾ ಮಟ್ಟದ ಸಂಪನ್ಮೂಲ ವ್ಯಕ್ತಿಗಳಿಂದ ಪ್ರಶಿಕ್ಷಣಾರ್ಥಿಗಳಿಗೆ ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಿ ಮಕ್ಕಳಿಗೆ ಹೆಚ್ಚಿನ ವಿಷಯ ಜ್ಞಾನಕ್ಕೆ ಸಹಾಯಕಾರಿಯಾಗಿದೆ.
5. ಸಿ.ಎಂ.ಡಿ.ಇ. ವಿಭಾಗದಿಂದ ನಡೆಸಲಾಗುವ ಮೌಲ್ಯಮಾಪನ ತರಬೇತಿಗಳು ಪಠ್ಯಪುಸ್ತಕ ವಿಶ್ಲೇಷಣೆಗೆ ಸಂಬಂದಿಸಿದಂತೆ ತರಬೇತಿ ಸಂಚಿಗಳನ್ನು ಪ್ರಶಿಕ್ಷಣಾರ್ಥಿಗಳು ತಮ್ಮ ಶೈಕ್ಷಣಿಕ ಕಾರ್ಯಚಟುವಟಿಕೆಗೆ ಬಳಸಿಕೊಳ್ಳಲು ಉತ್ತಮವಾದ ಸಂಪನ್ಮೂಲ ಸಾಹಿತ್ಯ ದೊರಕುತ್ತದೆ.
6. ಕೆ.ಎಸ್.ಕ್ಯು.ಎ.ಓ. ಪರೀಕ್ಷೆಗೆ ಸಂಬಂದಿಸಿದಂತೆ ಆಯಾ ನೋಡಲ್ ಅಧಿಕಾರಿಗಳು ಪ್ರಶಿಕ್ಷಣಾರ್ಥಿಗಳಿಗೆ ತರಬೇತಿ, ಪರೀಕ್ಷೆ ಹಾಗೂ ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸುವಲ್ಲಿ ಸೂಕ್ತ ಮಾರ್ಗದರ್ಶನ ನೀಡಿ ಈ ವಿಷಯದ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ಪಡೆಯಲು ಸಹಕರಿಸುತ್ತಾರೆ.
7. ಯೋಜನೆ ಮತ್ತು ನಿರ್ವಹಣೆ ವಿಭಾಗದಿಂದ ಹೊರತರುವ ಡಯಟ್ ನ ಶೈಕ್ಷಣಿಕ ಪತ್ರಿಕೆಯಾದ **ಜ್ಞಾನಗಾಮಿನಿ** ಗೆ ಪ್ರಶಿಕ್ಷಣಾರ್ಥಿಗಳು ಸ್ವರಚಿತ ಕವನಗಳು, ಶೈಕ್ಷಣಿಕ ಲೇಖನಗಳನ್ನು ಬರೆಯುವುದರಿಂದ ಈ ಮೂಲಕ ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರತಿಭೆಯನ್ನು ಹೊರತರಲು ಉತ್ತಮವಾದ ಅವಕಾಶವನ್ನು ಕಲ್ಪಿಸಲಾಗಿದೆ.
8. ಯೋಜನೆ ಮತ್ತು ನಿರ್ವಹಣ ವಿಭಾಗದ ಮೂಲಕ ನಡೆಯುವಂತಹ ತರಬೇತಿ ಸಂಚಿಗಳಲ್ಲಿರುವ ಹೊಸ ವಿಷಯಗಳನ್ನು ತಿಳಿದುಕೊಂಡುತಮ್ಮ ಶೈಕ್ಷಣಿಕ ಚಟುವಟಿಕೆಗಳಲ್ಲಿ ಬಳಸಿಕೊಳ್ಳಲು ಉತ್ತೇಜಿಸಲಾಗಿದೆ.ಉದಾಹರಣೆಗೆ ಸಂಸ್ಥಾಯೋಜನಾ ತರಬೇತಿ, ಮುಖ್ಯಶಿಕ್ಷಕರಿಗೆ ಆಡಳಿತಾತ್ಮಕ ತರಬೇತಿ, ಎಸ್.ಡಿ.ಎಂ.ಸಿ., ಅಕ್ಷರ ದಾಸೋಹ ಇತ್ಯಾದಿ
9. ಐಫಿಕ್ ವಿಭಾಗದ ಮೂಲಕ REMS ಅಡಿಯಲ್ಲಿ ನಡೆಯುವ ಸಂಶೋಧನೆಗಳು, ಕ್ಷೇತ್ರ ಅಧ್ಯಯನಗಳು, ಕ್ಷೇತ್ರಭೇಟಿಯ ಮಾಹಿತಿಗಳು, ಶೈಕ್ಷಣಿಕ ವಿಚಾರ ಗೋಷ್ಠಿ, ಇವುಗಳ ಮೂಲಕ ಹೊರಬಂದ ಉತ್ತಮ ಶೈಕ್ಷಣಿಕ ಅಂಶಗಳ ಜ್ಞಾನವನ್ನು ಪಡೆಯುತ್ತಾರೆ.
10. ಸೇವಾಪೂರ್ವ ವಿಭಾಗದಲ್ಲಿನ ಪ್ರಶಿಕ್ಷಣಾರ್ಥಿಗಳಿಗೆ ರಾಷ್ಟ್ರೀಯ ಸೇವಾ ಯೋಜನೆ, ಸಿ. ಟಿ. ಸಿ. ಹಾಗೂ ರಾಷ್ಟ್ರೀಯ ಹಬ್ಬಗಳು ಈ ಕಾರ್ಯಕ್ರಮಗಳಲ್ಲಿ ಎಲ್ಲಾ ವಿಭಾಗದ ಅಧಿಕಾರಿಗಳೂ ಭಾಗವಹಿಸಿ ಆಯಾ ಕಾರ್ಯಕ್ರಮಕ್ಕೆ ಸಂಬಂದಿಸಿದಂತೆ ಹೆಚ್ಚಿನ ಮಾಹಿತಿಗಳನ್ನು ನೀಡಿ ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗೆ ನೆರವು ನೀಡುತ್ತಾರೆ.
11. ಕಾರ್ಯ ಶಿಕ್ಷಣದಲ್ಲಿ ಹೊಸದಾಗಿ ಕಡಿಮೆ ವೆಚ್ಚದ ಬೋಧನೋಪಕರಣಗಳನ್ನು ತಯಾರಿಸಲು ಸಂಪನ್ಮೂಲ ವ್ಯಕ್ತಿಗಳ ಮಾಹಿತಿಯನ್ನು ಪಡಯುವರು. ಆ ಮೂಲಕ ತಮ್ಮ ಬೋಧನೆಯಲ್ಲಿ ಆಯಾ ವಿಷಯಗಳಿಗನುಗುಣವಾದ ಬೋಧನೋಪಕರಣಗಳನ್ನು ಸಿದ್ಧಪಡಿಸಿಕೊಂಡು ಬೋಧನೆ ಮಾಡುವರು.

**ಸೇವಾನಿರತ ತರಬೇತಿ :**

1. ಯೋಜನೆ ಮತ್ತು ನಿರ್ವಹಣಾ ವಿಭಾಗದ ವತಿಯಿಂದ ಡಯಟ್ ನ ವಾರ್ಷಿಕ ಕ್ರಿಯಾಯೋಜನೆಯನ್ನು ಸಿದ್ಧಪಡಿಸುವಾಗ ಡಯಟ್ ನ ಎಲ್ಲಾ ವಿಭಾಗದವರು ಭಾಗವಹಿಸಿ ಅವರ ವಿಭಾಗದ ಮೂಲಕ ನಡೆಯುವ ತರಬೇತಿಗಳ ಮಾಹಿತಿ ಹಾಗೂ ಅಂದಾಜು ಆಯ–ವ್ಯಯವನ್ನು ಚರ್ಚಿಸಿ ಇದರ ಆಧಾರದ ಮೇಲೆ ಪಿ. ಅಂಡ್ ಎಂ. ವಿಭಾಗದವರು ಡಯಟ್ ನ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿದ್ದಾರೆ.
2. ಡಯಟ್ ನ ವಿವಿಧ ವಿಭಾಗಗಳ ತರಬೇತಿಗಳನ್ನು ನಡೆಸಲು ಸಂಪನ್ಮೂಲ ವ್ಯಕ್ತಿಗಳ ವಿವರವನ್ನು ಹಾಗೂ ಸದರಿ ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಂಡು ತರಬೇತಿ ಸಂಚಿಯನ್ನು ಸಿದ್ಧಪಡಿಸಲು ಜಿಲ್ಲಾ ಸಂಪನ್ಮೂಲ ಘಟಕ ವಿಭಾಗದ ನೆರವನ್ನು ಪಡೆಯಬಹುದಾಗಿದೆ.
3. ತರಬೇತಿಗಳನ್ನು ನಡೆಸುವಾಗ ತರಬೇತಿಗೆ ಒಳಪಡಬೇಕಾದ ಶಿಕ್ಷಕರ ಮಾಹಿತಿಯನ್ನು ಪಿ ಅಂಡ್ ಎಂ. ವಿಭಾಗದಿಂದ ಪಡೆಯಬಹುದಾಗಿದೆ.
4. ಒಂದು ಆರ್ಥಿಕ ವರ್ಷದಲ್ಲಿ ಡಯಟ್ ನ ವಿವಿಧ ವಿಭಾಗಗಳ ಮೂಲಕ ನಡೆಸಿದ ತರಬೇತಿಗಳ ಸಂಪೂರ್ಣ ವಿವರವನ್ನು ಪಿ. ಅಂಡ್ ಎಂ. ವತಿಯಿಂದ ನಿರ್ವಹಿಸಲಾಗಿರುವ ಕ್ರೋಡೀಕೃತ ವಹಿಯಲ್ಲಿ ನಮೂದಿಸಿ ಪ್ರಗತಿಯ ಚಿತ್ರಣವನ್ನು ನೀಡಬಹುದಾಗಿದೆ.
5. ಇ. ಟಿ. ವಿಭಾಗದವರು, ಇತರೆ ವಿಭಾಗದವರು ತರಬೇತಿಯನ್ನು ಆಯೋಜಿಸಿದಾಗ ತರಬೇತಿಯಲ್ಲಿ ತಾಂತ್ರಿಕ ಅಂಶಗಳನ್ನು ಅಳವಡಿಸಿಕೊಳ್ಳಲು ಸಹಾಯ ಮಾಡುತ್ತಾರೆ.(ಎಲ್. ಸಿ. ಡಿ., ಒ.ಹೆಚ್.ಪಿ., ಸಿ.ಡಿ. ಇತ್ಯಾದಿ)
6. ಡಯಟ್‌ನ ಗ್ರಂಥಾಲಯದಲ್ಲಿ ಲಭ್ಯವಿರುವ ಸಂಪನ್ಮೂಲ ಸಾಹಿತ್ಯವನ್ನು ಎಲ್ಲಾ ವಿಭಾಗದವರು ತಮ್ಮ ಅವಶ್ಯಕತೆಗನುಗುಣವಾಗಿ ಬಳಕೆ ಮಾಡಿಕೊಳ್ಳುತ್ತಾರೆ.
7. ಡಯಟ್‌ನ ಅಧಿಕಾರಿಗಳು ಇಲಾಖೆಯ ಯಾವುದೇ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಂತರ ಡಯಟ್‌ನ ಎಲ್ಲಾ ವಿಭಾಗದವರ ಸಮ್ಮುಖದಲ್ಲಿ ಪರಸ್ಪರ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ.
8. ಡಯಟ್‌ನ ವಿವಿಧ ವಲಯದ ನೋಡಲ್ ಅಧಿಕಾರಿಗಳ ಇಲಾಖೆಯ ವಿವಿಧ ಕಾರ್ಯಕ್ರಮಗಳಿಗೆ ಸಂಬಂದಿಸಿದಂತೆ ಶಾಲೆಗಳಿಗೆ/ ಬಿ.ಆರ್.ಸಿ. ಕೇಂದ್ರಗಳಿಗೆ ಭೇಟಿ ನೀಡುವ ಮೊದಲು ನಮೂನೆಗಳನ್ನು ತಮ್ಮ ಹಂತದಲ್ಲಿಯೇ ಪರಸ್ಪರ ಚರ್ಚಿಸಿ ಸಿದ್ಧಪಡಿಸಿಕೊಳ್ಳಲಾಗುತ್ತದೆ.
9. ಡಯಟ್ ನಿಂದ ಪ್ರಕಟವಾದ ಜ್ಞಾನಗಾಮಿನಿ ಶೈಕ್ಷಣಿಕ ಪತ್ರಿಕೆಗೆ ಡಯಟ್ ನ ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರು ಉತ್ತಮ ಶೈಕ್ಷಣಿಕ ಲೇಖನಗಳನ್ನು ನೀಡಿ ಪತ್ರಿಕೆಯ ಯಶಸ್ಸಿಗೆ ಸಹಕರಿಸುತ್ತಾರೆ.
10. ಡಯಟ್‌ನ ಮೂಲಕ ಶಿಕ್ಷಕರಿಗೆ ನೀಡಿದಂತಹ ವಿವಿಧ ರೀತಿಯ ತರಬೇತಿಗಳು ಶಾಲಾ ಹಂತದಲ್ಲಿ ಅನುಷ್ಠಾನಗೊಂಡಿರುವುದನ್ನು ಖಚಿತ ಪಡಿಸಿಕೊಳ್ಳಲು ಡಯಟ್ ನ ಅಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿ ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಪಡೆಯುವರು.
11. ಐಫಿಕ್ ವಿಭಾಗದಿಂದ ಜಾರಿಗೊಳಿಸಲಾಗಿರುವ ಇಲಾಖಾ ಕಾರ್ಯಕ್ರಮವಾದ REMS ಕಾರ್ಯಕ್ರಮಗಳು ಅನುಷ್ಠಾನಗೊಳಿಸಲು ಡಯಟ್ ನ ಎಲ್ಲಾ ವಿಭಾಗಗಳು ಸಹಕಾರ ನೀಡಿವೆ.

ಒಟ್ಟಾರೆಯಾಗಿ ಸೇವಾಪೂರ್ವ ಹಾಗೂ ಸೇವಾನಿರತ ತರಬೇತಿಗಳನ್ನು ಆಯೋಜಿಸುವಲ್ಲಿ ಡಯಟ್ ನ ಏಳು ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಶಿಕ್ಷಣದ ಗುಣಾತ್ಮಕತೆಯನ್ನು ತರುವಲ್ಲಿ ಹೊಸ–ಹೊಸ ವಿಷಯಗಳನ್ನು ಕುರಿತಾಗಿ ವಿಚಾರ ಗೋಷ್ಠಿಗಳು, ಸಂಚಿಕೆಯ ತಯಾರಿಕೆ ಮುಂತಾದ ಕ್ರಿಯಾತ್ಮಕ ಕಾರ್ಯಗಳನ್ನು ಪರಸ್ಪರ ಚರ್ಚೆ, ಸಭೆಗಳು, ಸಮಾಲೋಚನೆಗಳನ್ನು ನಡೆಸಿ ಶಿಕ್ಷಣದ ಪ್ರಗತಿಗಾಗಿ ಕಾರ್ಯವನ್ನು ನಿರ್ವಹಿಸಲು ಬದ್ಧರಾಗಿರುವುದು.

## ಚಟುವಟಿಕೆ II (b)

"ಶಿಕ್ಷಕರ ಅವಶ್ಯಕತೆಗಳನ್ನು ಗುರುತಿಸುವುದು" ಈ ವಿಷಯವನ್ನು ಒಂದು ಅಧ್ಯಯನ/ಚಟುವಟಿಕೆಯಾಗಿ ಕೈಗೊಳ್ಳಲು ಡಯಟ್ ನ ವಿವಿಧ ವಿಭಾಗಗಳ ಕೊಡುಗೆ.

ಮೊದಲನೆಯದಾಗಿ ಡಯಟ್ ನ ಎಲ್ಲಾ ವಿಭಾಗಗಳ ಅಧಿಕಾರಿಗಳು ಸಭೆ ಸೇರಿ ಈ ವಿಷಯದ ಬಗ್ಗೆ ಅಧ್ಯಯನ ಕೈಗೊಳ್ಳಲು ಆಯ್ಕೆ ಮಾಡಿಕೊಳ್ಳಬೇಕಾದ ಕ್ಷೇತ್ರದ ಕುರಿತು ಹಾಗೂ ಕೈಗೊಳ್ಳಬೇಕಾದ ಚಟುವಟಿಕೆಗಳ ಬಗ್ಗೆ ಚರ್ಚಿಸಿ ಒಂದು ನಿರ್ದಿಷ್ಟವಾದ ಕ್ಷೇತ್ರವನ್ನು ಪ್ರಯೋಗಾಲಯ ಕ್ಷೇತ್ರವನ್ನಾಗಿ ಪರಿಗಣಿಸಿ(ದಕ್ಷಿಣ ವಲಯ-1) ಅಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳ ಕುರಿತು ಪ್ರಶ್ನಾವಳಿಗಳು, ಮಾಹಿತಿಗಳ ನಮೂನೆ, ಅಂಕಿ ಅಂಶಗಳ ನಮೂನೆ ಆಲೇಖಗಳ ಸಮೇತ ತರಲು ಡಯಟ್ ನ ವಿವಿಧ ವಿಭಾಗಗಳ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ಹಂಚಲಾಗುವುದು.

ಇದಕ್ಕಾಗಿ ಬೆಂಗಳೂರು ನಗರ ಜಿಲ್ಲೆಯ **ದಕ್ಷಿಣ ವಲಯ-1**ನ್ನು ಪ್ರಯೋಗಾಲಯ ಕ್ಷೇತ್ರವನ್ನಾಗಿ ಆಯ್ಕೆಮಾಡಿಕೊಂಡು ಒಂದು ಕ್ರಿಯಾ-ಯೋಜನೆಯನ್ನು ತಯಾರಿಸಿಕೊಳುವುದು.

### ಪ್ರಯೋಗಾಲಯ ಕ್ಷೇತ್ರ

**ಶೀರ್ಷಿಕೆ:- ಬೆಂಗಳೂರು ದಕ್ಷಿಣ ವಲಯ-1 ರಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಅವಶ್ಯಕತೆಗಳನ್ನು ಆಯೋಜಿಸಲು ಕ್ರಮಕೈಗೊಳ್ಳವುದು.**

**ಉದ್ದೇಶ:- ಶಿಕ್ಷಣದಲ್ಲಿ ಗುಣಾತ್ಮಕತೆಯನ್ನು ತರುವ ದೃಷ್ಟಿಯಿಂದ ಶಿಕ್ಷಕರಿಗೆ ಅವಶ್ಯಕವಾದ ತರಬೇತಿಗಳನ್ನು ಆಯೋಜಿಸಲು ಕ್ರಮಕೈಗೊಳ್ಳವುದು.**

### ಕ್ರಿಯಾಯೋಜನೆ

| ಕ್ರಮ ಸಂಖ್ಯೆ | ಉಪಚಟುವಟಿಕೆ | ಬೇಕಾದ ಸಂಪನ್ಮೂಲಗಳು | | |
|---|---|---|---|---|
| | | ಮಾನವ | ಸಾಮಗ್ರಿ | ಕಾಲ |
| 1 | ಅಭಿಪ್ರಾಯ ಸಂಗ್ರಹಣೆಗೆ ಅಗತ್ಯವಾದ ಪ್ರಶ್ನಾವಳಿಯ ತಯಾರಿ | ಡಯಟ್ ಸಿಬ್ಬಂದಿ<br>ಬಿ.ಆರ್.ಸಿ, ಸಿ.ಎ.ಇ.ಓ.<br>ಬಿ.ಆರ್.ಪಿ. ಮತ್ತು ಸಿ.ಆರ್.ಪಿ | ಲೇಖನ ಸಾಮಗ್ರಿ | 3 ದಿನಗಳು |
| 2 | ಶಾಲೆಗಳಿಗೆ ಭೇಟಿ ನೀಡಿ ಶಿಕ್ಷಕರಿಂದ ಪ್ರಶ್ನಾವಳಿ ಮತ್ತು ಮಾಹಿತಿಯನ್ನು ಸಂಗ್ರಹಿಸುವುದು. | ಡಯಟ್ ಸಿಬ್ಬಂದಿ<br>ಬಿ.ಆರ್.ಸಿ, ಸಿ.ಎ.ಇ.ಓ.<br>ಬಿ.ಆರ್.ಪಿ. ಮತ್ತು ಸಿ.ಆರ್.ಪಿ | ಲೇಖನ ಸಾಮಗ್ರಿ | 5 ದಿನಗಳು |
| 3 | ಮಾಹಿತಿ ಕ್ರೋಢೀಕರಣ ಮತ್ತು ವಿಶ್ಲೇಷಣೆ | ಡಯಟ್ ಸಿಬ್ಬಂದಿ<br>ಬಿ.ಆರ್.ಸಿ, ಸಿ.ಎ.ಇ.ಓ.<br>ಬಿ.ಆರ್.ಪಿ. ಮತ್ತು ಸಿ.ಆರ್.ಪಿ | ಲೇಖನ ಸಾಮಗ್ರಿ | 3 ದಿನಗಳು |
| 4 | ವರದಿ ತಯಾರಿಕೆ | ಡಯಟ್ ಸಿಬ್ಬಂದಿ | ಲೇಖನ ಸಾಮಗ್ರಿ ಮತ್ತು ಗಣಕ ಯಂತ್ರ | 4 ದಿನಗಳು |

ಕ್ಷೇತ್ರದಲ್ಲಿರುವ(ದ.ವ.-1) ಸಂಪನ್ಮೂಲ ವ್ಯಕ್ತಿಗಳು (ಬಿ.ಆರ್.ಸಿ., ಬಿ.ಆರ್.ಪಿ., ಸಿ.ಎ.ಇ.ಓ., ಸಿ.ಆರ್.ಪಿ.)ಹಾಗೂ ಡಯಟ್ ನ ಎಲ್ಲಾ ವಿಭಾಗದ ಮುಖ್ಯಸ್ಥರು ಈ ಚಟುವಟಿಕೆಗೆ ಸಂಬಂದಿಸಿದಂತೆ ಕಾರ್ಯಾಗಾರವನ್ನು ಏರ್ಪಡಿಸಿ ಅಧ್ಯಯನಕ್ಕಾಗಿ ರಚಿಸಬೇಕಾದ ಪ್ರಶ್ನಾವಳಿ, ಪಡೆಯಬೇಕಾದ ಮಾಹಿತಿ, ಅಂಕಿ ಅಂಶಗಳು ಇವುಗಳ ಬಗ್ಗೆ ಚರ್ಚಿಸಿ ಕ್ಷೇತ್ರ ಅಧ್ಯಯನಕ್ಕೆ ಸಿದ್ಧತೆ ಮಾಡಿಕೊಳ್ಳುವುದು.

ತಯಾರಿಸಿಕೊಂಡ ಪ್ರಶ್ನಾವಳಿಗಳನ್ನು ಸಂಬಂದಿಸಿದ ಅಧಿಕಾರಿಗಳು ಕ್ಷೇತ್ರ ಭೇಟಿ ನೀಡಿ ಶಿಕ್ಷಕರಿಗೆ ಸಂಬಂಧಿಸಿದ ನಮೂನೆಯಲ್ಲಿ ಮಾಹಿತಿಗಳನ್ನು ಭರ್ತಿ ಮಾಡಿ ಸಂಗ್ರಹಿಸುವುದು.

ಕ್ಷೇತ್ರ ಭೇಟಿಯಲ್ಲಿ ಪಡೆದಂತಹ, ಸಂಗ್ರಹಿಸಿದಂತಹ ಮಾಹಿತಿಗಳನ್ನು ಕ್ರೋಢೀಕರಿಸಿಕೊಂಡು ಮಾಹಿತಿಯ ವಿಶ್ಲೇಷಣೆಗಾಗಿ ಸಭೆಯನ್ನು ಏರ್ಪಡಿಸಿ ವಿಶ್ಲೇಷಣೆಯಲ್ಲಿ ಕಂಡುಬಂದ ಅಂಶಗಳನ್ನು ಅವಲೋಕಿಸಿ ಆಯ್ಕೆ ಮಾಡಿಕೊಂಡ ಪ್ರಯೋಗಾಲಯ ಕ್ಷೇತ್ರದಲ್ಲಿನ ಶಿಕ್ಷಕರ ಅವಶ್ಯಕತೆಗಳನ್ನು ಗುರುತಿಸಿಕೊಂಡು ಸೂಕ್ತ ತರಬೇತಿಗಳನ್ನು ಆಯೋಜಿಸಿಕೊಳ್ಳಲು ವ್ಯವಸ್ಥೆ ಮಾಡಿಕೊಳ್ಳುವುದು.

**ಚಟುವಟಿಕೆ–3**

ಒಂದು ಖಾಸಗಿ ಡಿ.ಇಡಿ. ಸಂಸ್ಥೆಗೆ ಭೇಟಿ ನೀಡಿ ಅವಲೋಕಿಸಿದ ಉತ್ತಮ ಅಂಶಗಳು ಹಾಗೂ ಸರಿಪಡಿಸಿಕೊಳ್ಳಬಹುದಾದ ಅಂಶಗಳನ್ನು ನಮ್ಮ ಸಂಸ್ಥೆಯೊಂದಿಗೆ ಹೋಲಿಸಿ ಮಾಡಲಾಗಿರುವ ವಿಶ್ಲೇಷಣೆ

ಈ ಚಟುವಟಿಕೆಯಲ್ಲಿ ಕೈಗೊಳ್ಳಲು ಪ್ರಾಂಶುಪಾಲರ ಆದೇಶದಂತೆ ಎಸ್.ಕೆ.ಪಿ. ಶಿಕ್ಷಕರ ತರಬೇತಿ ಸಂಸ್ಥೆ, ಮಲ್ಲಸಂದ್ರ, ಬೆಂಗಳೂರು–57. ಅನುದಾನ ರಹಿತ ಡಿ.ಇಡಿ. ಸಂಸ್ಥೆಯನ್ನು ಆಯ್ಕೆ ಮಾಡಿಕೊಂಡು ಎರಡೂ ಸಂಸ್ಥೆಗಳ ನಡುವೆ ಇರುವ ಅಂಶಗಳನ್ನು ಅವಲೋಕಿಸಲು ಒಂದು ನಮೂನೆಯನ್ನು ಸಿದ್ಧಪಡಿಸಿಕೊಳ್ಳಲಾಯಿತು. ಈ ನಮೂನೆಯಲ್ಲಿ ಮುಖ್ಯವಾಗಿ 04 ಭಾಗಗಳಿಗೆ ಆಧ್ಯತೆ ನೀಡಿ ನಮೂನೆ–1 ರಲ್ಲಿ ಸಂಸ್ಥೆಯ ಆಡಳಿತ ಮಂಡಳಿ, ನೋಂದಣಿ ಹಾಗೂ ಮಾಧ್ಯಮ, ನಮೂನೆ–2 ರಲ್ಲಿ ಸಂಸ್ಥೆಯ ಮೂಲಭೂತ ಸೌಕರ್ಯಗಳು, ನಮೂನೆ–3 ರಲ್ಲಿ ಶೈಕ್ಷಣಿಕ ಮಾಹಿತಿ ಹಾಗೂ ನಮೂನೆ–4 ರಲ್ಲಿ ಸಂಸ್ಥೆಯ ಕುರಿತಂತೆ ಸಾಮಾನ್ಯ ಅಭಿಪ್ರಾಯವನ್ನು ಸಂಗ್ರಹಿಸಲಾಯಿತು. ಸಂಗ್ರಹಿಸಲಾದ ಮಾಹಿತಿಗಳನ್ನು ಈ ಕೆಳಕಂಡಂತೆ ತುಲನೆ ಮಾಡಲಾಗಿದೆ.

| ವಿಷಯ | ಎಸ್.ಕೆ.ಟಿ. ಕಾಲೇಜು, ಮಲ್ಲಸಂದ್ರ, ಬೆಂಗಳೂರು–57 | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ರಾಜರಾಜೇಶ್ವರಿ ನಗರ, ಬೆಂಗಳೂರು–98 | ಅಭಿಪ್ರಾಯ/ ಸಲಹೆಗಳು |
|---|---|---|---|
| 1) ಮೂಲಭೂತ ಸೌಕರ್ಯಗಳು<br>ಅ) ತರಗತಿ ಕೊಠಡಿಗಳ ಸಂಖ್ಯೆ | 3 | 3 | ತರಗತಿ ಕೋಣೆಗಳ ಬಗ್ಗೆ ಹೆಚ್ಚಿನ ವ್ಯತ್ಯಾಸಗಳು ಕಂಡುಬರುವುದಿಲ್ಲ. ಆದರೆ ಖಾಸಗಿ ಸಂಸ್ಥೆಯಲ್ಲಿ ಆರ್ಥಿಕ ಸೌಲಭ್ಯವು ಉತ್ತಮವಾಗಿರುವುದರಿಂದ ತರಗತಿಗಳನ್ನು ಆಧುನಿಕ ರೀತಿಯಲ್ಲಿ ವ್ಯವಸ್ಥೆಗೊಳಿಸಬಹುದು. (ಒ.ಹೆಚ್.ಪಿ., ಎಲ್.ಸಿ.ಡಿ. ಇತ್ಯಾದಿ) |
| ಆ) ಆಸನ ವ್ಯವಸ್ಥೆ | ಸಮಾನ್ಯವಾದಂತಹ ಡೆಸ್ಕ್ ಮತ್ತು ಬೇಂಚಿನ ವ್ಯವಸ್ಥೆ ಇದೆ. | ಸಮಾನ್ಯವಾದಂತಹ ಡೆಸ್ಕ್ ಮತ್ತು ಬೇಂಚಿನ ವ್ಯವಸ್ಥೆ ಇದೆ. | ಆಸನ ವ್ಯವಸ್ಥೆಯ ಸೌಲಭ್ಯ ಎರಡೂ ಸಂಸ್ಥೆಗಳಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೂ ಸೂಕ್ತವಾಗಿ ಕಲ್ಪಿಸಲಾಗಿದೆ. |
| ಇ) ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ | ಉತ್ತಮವಾಗಿದೆ | ಉತ್ತಮವಾಗಿದೆ | – |
| ಈ) ವಿಜ್ಞಾನ ಪ್ರಯಾಗಾಲಯ | ಪ್ರತ್ಯೇಕವಾಗಿ ಭೌತಶಾಸ್ತ್ರ, ರಸಾಯನ ಶಾಸ್ತ್ರ ಹಾಗೂ ಜೀವಶಾಸ್ತ್ರಕ್ಕೆ ಪ್ರಯೋಗಾಲಯವಿದೆ. ಪಿ.ಯು.ಸಿ. ವಿದ್ಯಾರ್ಥಿಗಳು ಇದನ್ನು ಬಳಕೆ ಮಾಡಿಕೊಳ್ಳುತ್ತಿದ್ದಾರೆ. | ಡಯಟ್‌ನಲ್ಲಿ ಭೌತಶಾಸ್ತ್ರ, ರಸಾಯನ ಶಾಸ್ತ್ರ ಹಾಗೂ ಜೀವಶಾಸ್ತ್ರಕ್ಕೆ ಒಂದೇ ಪ್ರಯೋಗಾಲಯವಿದ್ದು, ಎಲ್ಲಾ ಉಪಕರಣಗಳನ್ನು ಇಲ್ಲಿ ವ್ಯವಸ್ಥಿತವಾಗಿ ಬಳಕೆ ಮಾಡಿಕೊಳ್ಳಲಾಗುತ್ತಿದೆ. | ಖಾಸಗಿ ಡಿ.ಇಡಿ. ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಕರಾಗಬೇಕಾಗಿರುವುದರಿಂದ ಅವರಿಗೆ ಮೂಲಭೂತವಾಗಿ ಹೆಚ್ಚಿನ ಜ್ಞಾನವನ್ನು ಪಡೆಯುವ ಅವಶ್ಯಕತೆಯಿರುವುದರಿಂದ ಪ್ರತ್ಯೇಕವಾದ ಪ್ರಯೋಗಾಲಯದ ಅವಶ್ಯಕತೆಯಿದೆ. |

| | | | |
|---|---|---|---|
| ಉ) ಮನೋವಿಜ್ಞಾನ ಪ್ರಯೋಗಾಲಯ | ಮನೋವಿಜ್ಞಾನ ಪ್ರಯೋಗಾಲಯದಲ್ಲಿ ಪ್ರಯೋಗಗಳಿಗೆ ಸಂಬಂಧಿಸಿದಂತೆ ಉಪಕರಣಗಳನ್ನು ಇಡಲಾಗಿದೆ. | ಮನೋವಿಜ್ಞಾನ ಪ್ರಯೋಗಾಲಯದಲ್ಲಿ ಪ್ರಯೋಗಗಳಿಗೆ ಅನುಗುಣವಾಗಿ ಉಪಕರಣಗಳನ್ನು ಜೋಡಿಸಲಾಗಿದೆ. | ಶೈಕ್ಷಣಿಕ ಮನೋವಿಜ್ಞಾನದ ಪ್ರಯೋಗಗಳನ್ನು ಗುಂಪಿನಲ್ಲಿ ಹಾಗೂ ಪ್ರತ್ಯೇಕವಾಗಿ ಒಬ್ಬನೇ ಮಾಡುವುದರಿಂದ ಎಲ್ಲಾ ಉಪಕರಣಗಳನ್ನು ಖಾಸಗಿ ಸಂಸ್ಥೆಯಲ್ಲಿ ಕ್ರಮಬದ್ಧವಾಗಿ ಜೋಡಿಸಿ, ಉಪಕರಣಗಳಿಗೆ ನಾಮಫಲಕವನ್ನು ಬರೆದು ಪ್ರದರ್ಶಿಸುವಂತಿರಬೇಕು. |
| ಊ) ಗ್ರಂಥಾಲಯ | ಇದೆ | ಇದೆ | ಗ್ರಂಥಾಲಯದಲ್ಲಿ ಅನುದಾನ ರಹಿತ ಡಿ.ಇಡಿ. ಸಂಸ್ಥೆಯಲ್ಲಿ ಡಿ.ಇಡಿ. ಪಠ್ಯಪುಸ್ತಕಗಳ ಜೊತೆಗೆ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಸಾಹಿತ್ರ ಪುಸ್ತಕಗಳನ್ನು ಹಾಗೂ ಡಿ.ಎಸ್.ಇ.ಆರ್.ಟಿ., ವತಿಯಿಂದ ಪ್ರಕಟಗೊಳ್ಳುವ ಶೈಕ್ಷಣಿಕ ಸಾಹಿತ್ಯಗಳನ್ನು ಕಲ್ಪಿಸಿಕೊಡಬೇಕು. |
| ಋ) ಕಂಪ್ಯೂಟರ್ ಲ್ಯಾಬ್ | ಇದೆ | ಇದೆ | ಕಂಪ್ಯೂಟರ್‌ಗಳನ್ನು ಬಳಕೆ ಮಾಡಿಕೊಂಡು ಕೆಲವು ನಿರ್ದಿಷ್ಠವಾದ ಪಾಠಗಳನ್ನು ಪವರ್‌ಪಾಯಿಂಟ್ ಮೂಲಕ ಹಾಗೂ ಪ್ರಾಜೆಕ್ಟ್‌ಗಳನ್ನು ಕಂಪ್ಯೂಟರ್ ಬಳಸಿ ಮಾಡುವಂತೆ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಸೂಕ್ತವಾದ ಅನುಕೂಲವನ್ನು ಖಾಸಗಿ ಸಂಸ್ಥೆಯವರು ಕಲ್ಪಿಸಬೇಕು. |
| ಎ) ದೈಹಿಕ ಶಿಕ್ಷಣ ಕೊಠಡಿ | ಇದೆ | ಇದೆ | ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಮಟ್ಟದಲ್ಲಿ ಕ್ರೀಡೆಯಲ್ಲಿ ಭಾಗವಹಿಸಲು ಉತ್ತೇಜನವನ್ನು ನೀಡಬೇಕು. |
| ಏ) ರಾಷ್ಟ್ರೀಯ ಸೇವಾ ಯೋಜನೆ ಘಟಕ | ಇದೆ | ಇದೆ | ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ |
| 2 ಶೈಕ್ಷಣಿಕ ಸೌಲಭ್ಯಗಳು ಅ) ಬೋಧನೆಯಲ್ಲಿ ಪ್ರಶಿಕ್ಷಕರ ಪಾತ್ರ | ನಿಗದಿತ ವಿಷಯಗಳನ್ನು ಮಾತ್ರ ನಿಗದಿತ ವೇಳೆಯಲ್ಲಿ ಬೋಧಿಸುತ್ತಾರೆ. | ಉಪನ್ಯಾಸಕರು ಪಾಠ ಬೋಧನೆಯ ಜೊತೆಗೆ ಇಲಾಖೆಯ ಇತರೆ ಕಾರ್ಯಕ್ರಮಗಳ ಮಾಹಿತಿಯನ್ನು ಪ್ರಶಿಕ್ಷಣಾರ್ಥಿಗಳಿಗೆ ತಿಳಿಸುತ್ತಾರೆ. | ವಿದ್ಯಾರ್ಥಿಗಳಿಗೆ ಪಾಠ ಬೋಧನೆಯ ಜೊತೆಗೆ ಪ್ರಚಲಿತ ಶೈಕ್ಷಣಿಕ ಯೋಜನೆಗಳನ್ನು ತಿಳಿಸುವಂತಿರಬೇಕು. ಈ ಕಾರ್ಯಗಳನ್ನು ಖಾಸಗಿ ಸಂಸ್ಥೆಯ ಉಪನ್ಯಾಸಕರು ನಿರ್ವಹಿಸಬೇಕು. |

| | | | |
|---|---|---|---|
| ಆ) ತರಬೇತಿಗಳ ಆಯೋಜನೆ ಮತ್ತು ಭಾಗವಹಿಸುವುದು. | ಈ ಸೌಲಭ್ಯ ಇಂದಿನ ಪ್ರಶಿಕ್ಷರಿಗೆ ದೊರೆಯುತ್ತಿಲ್ಲ. | ಉಪನ್ಯಾಸಕರು ತರಬೇತಿಗಳನ್ನು ಆಯೋಜಿಸಿ ತರಬೇತಿಯಲ್ಲಿ ಪಾಲ್ಗೊಳ್ಳುತ್ತಾರೆ. | ಹೆಚ್ಚಿನ ತರಬೇತಿಗಳಲ್ಲಿ ಉಪನ್ಯಾಸಕರು ಭಾಗವಹಿಸದಾಗ ಅವರ ಬೋಧನೆಗೆ ಸಹಕಾರಿಯಾಗುತ್ತದೆ. ಉದಾ: ವಿಷಯ ಸಂಪದೀಕರಣ, ಹಾಗೂ ಕ್ರಿಯಾಸಂಶೋಧನೆ ಇತ್ಯಾದಿ. ಆದರೆ ಇಂತಹ ತರಬೇತಿಯಿಂದ ಖಾಸಗಿ ಸಂಸ್ಥೆಯ ಉಪನ್ಯಾಸಕರು ವಂಚಿತರಾಗುತ್ತಿದ್ದಾರೆ. ಅವರಿಗೆ ಈ ತರಬೇತಿಗಳಲ್ಲಿ ಭಾಗವಹಿಸುವಂತೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕಾಗಿದೆ. |
| ಇ) ಡಿ.ಇಡಿ. ಪ್ರಶಿಕ್ಷಕರ ವಿಷಯ ಪ್ರಭುತ್ವ. | ಪ್ರಶಿಕ್ಷಕರು ಡಿ.ಇಡಿ. ಪಠ್ಯ ವಸ್ತುವಿನಲ್ಲಿರುವ ಎಲ್ಲಾ ವಿಷಯಗಳು ಹಾಗೂ ಶಿಕ್ಷಣ ಪತ್ರಿಕೆಗಳ ಜ್ಞಾನವನ್ನು ಹೊಂದಿರಬೇಕು. | ಡಯಟ್ ಎಲ್ಲಾ ಡಿ.ಇಡಿ. ಸಂಸ್ಥೆಗಳಿಗೂ ಸಂಪನ್ಮೂಲ ಘಟಕವಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಇಲ್ಲಿನ ಉಪನ್ಯಾಸಕರು ಉತ್ತಮ ಮಟ್ಟದ ಜ್ಞಾನವನ್ನು ಹೊಂದಿರುವರು. | ಖಾಸಗಿ ಸಂಸ್ಥೆಯ ಉಪನ್ಯಾಸಕರು ಪಠ್ಯವಸ್ತು ಹಾಗೂ ಶೈಕ್ಷಣಿಕ ಪತ್ರಿಕೆಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಪಡೆಯುವಂತೆ ಮಾಡಲು ಕಾರ್ಯಾಗಾರ, ತರಬೇತಿ, ವಿಚಾರಗೋಷ್ಠಿ ಇವುಗಳನ್ನು ಏರ್ಪಡಿಸಬಹುದು. |
| ಈ) ಪ್ರಶಿಕ್ಷಕರ ಕಾರ್ಯನಿರ್ವಹಣೆ | ಪ್ರಶಿಕ್ಷಕರು ಒಂದು ಶೈಕ್ಷಣಿಕ ಪೂರ್ಣವಾಗುವವರೆಗು ಒಂದೇ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವುದು ಕಡಿಮೆಯಾಗಿದೆ. | ಡಯಟ್‌ನಲ್ಲಿ ಉಪನ್ಯಾಸಕರು ಕನಿಷ್ಠ ಎರಡು ಮೂರು ವರ್ಷಗಳು ಅದೇ ಸಂಸ್ಥೆಯಲ್ಲಿ (ವಿಭಾಗ) ಕಾರ್ಯನಿರ್ವಹಿಸುವುದರಿಂದ ವಿಷಯದಲ್ಲಿ ಪ್ರಭುತ್ವವನ್ನು ಸಾಧಿಸಬಹುದು. | ಖಾಸಗಿ ಸಂಸ್ಥೆಯಲ್ಲಿಯೂ ಪ್ರಶಿಕ್ಷಕರ ಅವಶ್ಯಕತೆಗಳನ್ನಾಧರಿಸಿ ಅವರಿಗೆ ಸೂಕ್ತವಾದ ಅನುಕೂಲಗಳನ್ನು ಒದಗಿಸಬೇಕು. (ವೇತನ, ಉತ್ತಮವಾದ ಬಾಂಧವ್ಯ) |
| ಉ) ಅಣುಬೋಧನೆ | ಉತ್ತಮ | ಉತ್ತಮ | ಅಣುಬೋಧನೆಗೆ ಸಂಬಂಧಿಸಿದಂತೆ ಪಠ್ಯ ವಸತುವಿನಲ್ಲಿ ಸೂಚಿಸಿರುವ ಅಂಕಗಳಿಗನುಗುಣವಾಗಿ ನಡೆಸುವ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಸುಧಾರಣೆಯಾಗಬೇಕಾಗಿದೆ. |

| | | | |
|---|---|---|---|
| ಊ) ಬೋಧನೋಪಕರಣಗಳ ತಯಾರಿಕೆ | ಇದೆ | ವ್ಯವಸ್ಥಿತವಾಗಿ ಸಂಪನ್ಮೂಲ ವ್ಯಕ್ತಿಗಳನ್ನು ಬಳಕೆ ಮಾಡಿಕೊಂಡು ವೇಳಾಪಟ್ಟಿಯೊಂದಿಗೆ ಮೂರು ದಿನಗಳ ಕಾರ್ಯಾಗಾರವನ್ನು ಕೈಗೊಂಡು ಪ್ರತಿಯೊಂದು ವಿಷಯದಲ್ಲೂ ಕಡಿಮೆ ವೆಚ್ಚದ ಬೋಧನೋಪಕರಣಗಳ ತಯಾರಿಕೆಗೆ ಸೂಕ್ತ ಮಾರ್ಗದರ್ಶನ ನೀಡಲಾಗುತ್ತದೆ. | ಖಾಸಗಿ ಸಂಸ್ಥೆಯಲ್ಲಿಯೂ ಈ ಬೋಧನೋಪಕರಗಳ ತಯಾರಿಕೆಗೆ ಸಂಬಂಧಿಸಿದಂತೆ ಕಾರ್ಯಾಗಾರವನ್ನು ವ್ಯವಸ್ಥೆ ಮಾಡಿಕೊಳ್ಳುವುದು ಸೂಕ್ತವೆನಿಸುತ್ತದೆ. |
| ಋ) ನಿಯೋಜಿತ ಕಾರ್ಯ, ಡೈರಿ. (ದಿನಚರಿ) | ನಿರ್ವಹಿಸಲಾಗಿದೆ. | ನಿರ್ವಹಿಸಲಾಗಿದೆ. | ನಿಯೋಜಿತ ಕಾರ್ಯಗಳಲ್ಲಿ ನಾವಿನ್ಯತೆ ಇರಬೇಕು. ಕ್ರಿಯಾಶೀಲತೆ ಹಾಗೂ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆಗೆ ಅವಕಾಶ ಮಾಡಿಕೊಡಬೇಕು. |
| ಎ) ಕ್ರಿಯಾಸಂಶೋಧನೆ | ವಿದ್ಯಾರ್ಥಿಗಳಿಂದ ಮಾಡಿಸಿದ್ದಾರೆ | ಡಯಟ್‌ನಲ್ಲಿ ಕ್ರಮಬದ್ಧವಾಗಿ ಕ್ರಿಯಾಯೋಜನೆಯ ತರಬೇತಿಯನ್ನು ಉಪನ್ಯಾಸಕರು ಪಡೆದುಕೊಂಡಿದ್ದಾರೆ ಹಾಗೂ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟಿದ್ದಾರೆ. ಪ್ರಾಥಮಿಕ ಶಾಲಾ ಶಿಕ್ಷಕರಿಗೂ ಸಹ ಈ ತರಬೇತಿಯನ್ನು ಆಯೋಜಿಸಿದ್ದಾರೆ. | ಖಾಸಗಿ ಸಂಸ್ಥೆಯಲ್ಲಿ ಕ್ರಿಯಾ ಸಂಶೋಧನೆಯ ಬಗ್ಗೆ ಉಪನ್ಯಾಸಕರಿಗೆ ಸೂಕ್ತ ತರಬೇತಿಯನ್ನು ನೀಡಬೇಕು, ಈ ತರಬೇತಿಯು ಯಾವುದೇ ಸಂಪನ್ಮೂಲದಿಂದ ಪಡೆಯಬಹುದು. |
| ಏ) ಚೈತನ್ಯ, ತರಣಿ, ರಂಗಕಲೆ ಮತ್ತು ಬಹುಮುಖಿ. | ಉತ್ತಮವಾಗಿದೆ | ಉತ್ತಮವಾಗಿದೆ | ಬಹುವರ್ಗ ಬೋಧನೆಯಲ್ಲಿ ಖಾಸಗಿ ಸಂಸ್ಥೆಯ ಪ್ರಶಿಕ್ಷಣಾರ್ಥಿಗಳು ಇನ್ನೂ ಹೆಚ್ಚಿನ ಮಾಹಿತಿಯನ್ನು ಪಡೆಯಬೇಕು. |
| ಐ) ನೀಲಿ ನಕ್ಷೆ, ಪ್ರಶ್ನೆ ತಯಾರಿಕೆ. | ಉತ್ತಮವಾಗಿದೆ | ಉತ್ತಮವಾಗಿದೆ. | – |

ಮೇಲ್ಕಂಡ ಅಂಶಗಳನ್ನು ಅವಲೋಕಿಸಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಹಾಗೂ ಅನುದಾನ ರಹಿತ ಡಿ.ಇಡಿ. ಸಂಸ್ಥೆಗೆ ಮೂಲಭೂತ ಹಾಗೂ ಶೈಕ್ಷಣಿಕ ಅಂಶಗಳನ್ನು ಗಮನಿಸಿದಾಗ ಹಲವಾರು ಅಂಶಗಳಲ್ಲಿ ಉತ್ತಮ ಅಂಶಗಳು ಕಂಡುಬಂದಿವೆ. ಇನ್ನೂ ಕೆಲವು ಸುಧಾರಣೆಯಾಗಬೇಕಾಗಿದೆ.

ಚಟುವಟಿಕೆ–4(1)

# ಹಗಲು ಗನಸು( ದಿವಾಸ್ವಪ್ನ)

ಭಾರತೀಯ ಶಾಲಾ ಶಿಕ್ಷಣಕ್ಕೆ ಮಹತ್ತರವಾದ ಕೊಡುಗೆ ನೀಡಿದವರು **ಗೀಜುಭಾಯಿ ಬಧೇಕಾರವರು,** ಮಕ್ಕಳಿಗೆ ಸ್ವಾತಂತ್ರ್ಯ ಹಾಗೂ ಸ್ವಾವಲಂಬನೆಗಳನ್ನು ಒದಗಿಸಿಯೂ ಪರಿಣಾಮಕಾರಿಯಾಗಿ ಕಲಿಸಲು ಸಾಧ್ಯವೆಂದು ತೋರಿಸಿಕೊಟ್ಟ ಇವರ ಸಾಧನೆ ಹಾಗೂ ಅನುಭವಗಳು ಅನನ್ಯ. ಅಂತರರಾಷ್ಟ್ರೀಯ ಶಿಕ್ಷಣ ಶಾಸ್ತ್ರದಲ್ಲಿ ಇದೊಂದು ಅಭೂತ ಪೂರ್ವಕಾಣಿಕೆ. ಪಠ್ಯಪುಸ್ತಕವನ್ನು ಬದಿಗೊತ್ತಿ ಮಕ್ಕಳೊಂದಿಗೆ ಇದ್ದು ಪ್ರಯೋಗ ಶೀಲನಾಗಿರುವಂಥ ಕಾಲ್ಪನಿಕ ಶಿಕ್ಷಕನೊಬ್ಬನ ಕಥೆಯೇ ಈ ಹಗಲು ಗನಸು.

ಹಗಲು ಗನಸು ಪುಸ್ತಕವನ್ನು ನಾನು ಓದುವುದರೊಂದಿಗೆ ನಮ್ಮ ಡಿ.ಇಡಿ. ವಿದ್ಯಾರ್ಥಿಗಳಿಗೂ ಓದಲು ಅವಕಾಶ ಮಾಡಿಕೊಡಲಾಯಿತು, ಈ ಪುಸ್ತಕವನ್ನು ಓದಿ ಅದರಲ್ಲಿನ ತಂತ್ರಾಂಶಗಳನ್ನು ನಮ್ಮ ಹಂತದಲ್ಲಿ ತರಬೇತಿಯನ್ನು ಆಯೋಜಿಸುವಾಗ ಶಿಕ್ಷಕರಿಗೆ ತರಬೇತಿಯ ವಿನ್ಯಾಸದಲ್ಲಿ ಈ ಪುಸ್ತಕದಲ್ಲಿನ ತಂತ್ರಾಂಶಗಳನ್ನು ತಿಳಿಸಿ ಅವರು ತಮ್ಮ ತರಗತಿಯಲ್ಲಿ ಅಳವಡಿಸಿಕೊಂಡು ಕಲಿಕೆಯನ್ನು ಉಲ್ಲಾಸದಾಯಕವನ್ನಾಗಿ ಮಾಡಬಹುದು.

## ಪುಸ್ತಕದಲ್ಲಿ ಗಮನಿಸಿರುವ ಅಂಶಗಳು:

1. ತರಗತಿಯಲ್ಲಿ ಶಿಸ್ತು
2. ಕಥೆ ಹೇಳುವುದು(ಕಥೆ ಹೇಳುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಏಕಾಗ್ರತೆಯನ್ನುಂಟು ಮಾಡುವುದು)
3. ಆರೋಗ್ಯ ಶಿಕ್ಷಣ
4. ಪೋಷಕರ ಮತ್ತು ಶಿಕ್ಷಕರ ನಡುವೆ ಇರುವ ಸಂಬಂಧ
5. ದೈಹಿಕ ಶಿಕ್ಷಣ
6. ಸಂಗೀತ
7. ಪುಸ್ತಕಾಲಯ
8. ಧಾರ್ಮಿಕ ಶಿಕ್ಷಣ
9. ಪ್ರವಾಸ
10. ಶಿಕ್ಷಕ–ಶಿಕ್ಷಕರ ನಡುವೆ ಸಂಬಂಧ
11. ವಿದ್ಯಾರ್ಥಿಗಳಿಗೆ ನೀಡುವ ಚಟುವಟಿಕೆಗಳು
12. ಸೃಜನ ಶೀಲತೆ
13. ಲಭ್ಯ ಸಂಪನ್ಮೂಲಗಳ ಬಳಕೆ
14. ತರಗತಿ ನಿರ್ವಹಣೆ
15. ನೈಜ ಸನ್ನಿವೇಶವನ್ನು ಸೃಷ್ಟಿಸುವುದು
16. ಚಿತ್ರಕಲೆ
17. ಪರೀಕ್ಷಾ ದೃಷ್ಟಿಯಿಂದ ಕಲಿಕೆಯನ್ನು ನಡೆಸಬಾರದು
18. ವ್ಯಾಕರಣ ಬೋಧನೆಯನ್ನು ಚಟುವಟಿಕೆಯಿಂದ ಮಾಡಿಸುವುದು(ಲಿಂಗ, ಸರ್ವನಾಮ ಇತ್ಯಾದಿ)
19. ದಿನಚರಿಯ ಮಹತ್ವ
20. ನಾಟಕ ವಿಧಾನ
21. ಆಟದ ಮೂಲಕ ಪಾಠ
22. ಶಾಲೆಯಲ್ಲಿ ವಾಚನಾಲಯದ ಬಳಕೆ

2. **ತರಬೇತಿಯಲ್ಲಿ ಅಳವಡಿಸಿಕೊಳ್ಳುವ ವಿಧಾನ**

**ತರಬೇತಿಯ ವಿನ್ಯಾಸದ ಅರ್ಥ**: ತರಬೇತಿಯ ಆರಂಭದಿಂದ ಅಂತ್ಯದವರೆಗೆ ತರಬೇತುದಾರ ಮತ್ತು ಶಿಬಿರಾರ್ಥಿಗಳು ನಿಗದಿತ ಕಾಲಾವಧಿಯಲ್ಲಿ ನಿರ್ದಿಷ್ಟ ಉದ್ದೇಶಗಳ ಈಡೇರಿಕೆಗಾಗಿ ಕೈಗೊಳ್ಳುವ ಎಲ್ಲಾ ಚಟುವಟಿಕೆಗಳ ಒಂದು ಪೂರ್ವಭಾವಿ ಯೋಜನೆ.

ಡಯಟ್‌ನಲ್ಲಿ ತರಬೇತಿಯನ್ನು **ಎರಡು ರೀತಿಯಲ್ಲಿ ಆಯೋಜಿಸಲಾಗುವುದು.**

1. ಶಿಕ್ಷಕರಿಗೆ ಪ್ರತ್ಯೇಕವಾಗಿ **"ಶಿಕ್ಷಕರ ವ್ಯಕ್ತಿತ್ವ ವಿಕಸನ"** ಎಂಬ ವಿಷಯದ ಬಗ್ಗೆ ತರಬೇತಿಯನ್ನು ಆಯೋಜಿಸುವುದು.
2. ಡಯಟ್‌ನಲ್ಲಿ ನಡೆಯುವ ವಿವಿಧ ತರಬೇತಿಗಳಲ್ಲಿ ಈ ಮೇಲಿನ ಅಂಶಗಳನ್ನು ಅಳವಡಿಸಿಕೊಂಡು ಶಿಕ್ಷಕರು ತರಗತಿ ಕೋಣೆಯಲ್ಲಿ **ಗುಣಾತ್ಮಕ ಕಲಿಕೆ** ಯನ್ನು ಮಕ್ಕಳಲ್ಲಿ ಉಂಟುಮಾಡಲು ಶಿಕ್ಷಕರ ವ್ಯಕ್ತಿತ್ವ ವನ್ನು ರೂಪಿಸುವ ಮಾಹಿತಿಯನ್ನು ನೀಡಲಾಗುವುದು.

**ತರಬೇತಿಯ ಹೆಸರು: ಶಿಕ್ಷಕರ ವ್ಯಕ್ತಿತ್ವ ವಿಕಸನ.**

***<u>ತರಬೇತಿಯ ವೇಳಾಪಟ್ಟಿ</u>***

| ದಿನಾಂಕ | **9.30 to 10.00** | **10.00 to 11.30** | **11.30 to 11.45** | **11.45 to 1.15** | **1.15 to 2.00** | **2.00 to 3.30** | **3.30 to 3.45** | **3.45 to 5.15** |
|---|---|---|---|---|---|---|---|---|
| 22.7.08 | ನೊಂದಣಿ, ಪೂರ್ವ ಪರೀಕ್ಷೆ | ಶಿಕ್ಷಣದ ಅರ್ಥ, ಪರಿಕಲ್ಪನೆ,ಶಿಕ್ಷಣ ತಜ್ಞರ ಚಿಂತನೆಗಳು | ಚಹಾ ವಿರಾಮ | ತರಗತಿಯ ಲ್ಲಿ ಶಿಸ್ತು ಹಾಗೂ ಅನುಷ್ಠಾನ | ಊಟದ ವಿರಾಮ | ಗುಣಮಟ್ಟದ ಕಲಿಕೆಗೆ ತರಗತಿಯಲ್ಲಿ ಅಳವಡಿಸಿಕೊಳ್ಳಬೇಕಾದ ಬೋಧನಾ ಚಟುವಟಿಕೆಗಳು | ಚಹಾ ವಿರಾಮ | ಪುಸ್ತಕಾಲಯ –ಬಳಕೆಮತ್ತು ನಿರ್ವಹಣೆ |
| 23.7.08 | ಹಿಂದಿನ ದಿನದ ತರಬೇತಿಯ ಮುಖ್ಯಾಂಶ ಗಳನ್ನು ಚರ್ಚಿಸುವು ದು | ಬೊಧನಾ ಕಲಿಕಾ ಪ್ರಕ್ರಿಯೆಯಲ್ಲಿ ಲಭ್ಯ ಸಂಪನ್ಮೂಲಗಳ ಬಳಕೆ | ಚಹಾ ವಿರಾಮ | ಶಿಕ್ಷಕರ ಗುಣಗಳು ಹಾಗೂ ವ್ಯಕ್ತಿತ್ವ | ಊಟದ ವಿರಾಮ | ಪಠೇತ್ಯರ ಚಟುವಟಿಕೆಗಳು ಪಠ್ಯ ವಸ್ತುವಿನ ಬೋಧನೆಗೆ ಹೇಗೆ ಪೂರಕ | ಚಹಾ ವಿರಾಮ | ಸಾಫಲ್ಯ ಪರೀಕ್ಷೆ, ತರಬೇತಿಯ ಮುಕ್ತಾಯ ಸಮಾರಂಭ |

**ಚಟುವಟಿಕೆ:** ಶಿಬಿರಾರ್ಥಿಗಳನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಿ ಪ್ರತಿ ಎರಡು ಗುಂಪಿಗೆ ಒಂದು ವಿಷಯವನ್ನು ನೀಡಿ ಅಭಿಪ್ರಾಯ ಸಂಗ್ರಹಿಸಿ, ಮಂಡನೆಗೆ ಅವಕಾಶ ನೀಡಲಾಗುವುದು.

## ಡಯಟ್ ಹಂತದಲ್ಲಿ ಹಮ್ಮಿಕೊಳ್ಳುವ ತರಬೇತಿಯಲ್ಲಿ ಅಳವಡಿಸಿಕೊಳ್ಳಬಹುದಾದ ತಾಂತ್ರಿಕಾಂಶಗಳು

ತರಬೇತಿಯ ಹೆಸರು : **ಚಿಣ್ಣರ ಅಂಗಳ**

### ತರಬೇತಿಯ ವೇಳಾಪಟ್ಟಿ

| ದಿನಾಂಕ | 9.30-10.00 | 10.00-11.30 | 11.30 - 11.45 | 11.45-1.15 | 1.15-2.00 | 2.00-3.30 | 3.30 - 3.45 | 3.45-5.15 |
|---|---|---|---|---|---|---|---|---|
| 29.7.08 | ನೊಂದಣಿ ಪೂರ್ವ ಪರೀಕ್ಷೆ | ಚಿಣ್ಣರ ಅಂಗಳ ಹಿನ್ನೆಲೆಯಲ್ಲಿ ಭಾಷಾ ಬೋಧನೆಯ ಉದ್ದೇಶಗಳು,ಪಠ್ಯವಸ್ತು ಮತ್ತು ಕಲಿಕೆಯ ವಿಧಾನಗಳು | ಟೀ ವಿರಾಮ | ಪಠೇತ್ಯರ ಚಟುವಟಿಕೆಗಳು ಪಠ್ಯ ವಸ್ತುವಿನ ಬೋಧನೆಗೆ ಹೇಗೆ ಪೂರಕ | ಊಟದ ವಿರಾಮ | ಪರಿಸರ ಅಧ್ಯಯನ– ಅರ್ಥ, ಉದ್ದೇಶ ಹಾಗೂ ಕಲಿಕಾಂಶಗಳು | ಟೀ ವಿರಾಮ | ಕ್ಷೇತ್ರ ಭೇಟಿಯ ಪ್ರಾಮುಖ್ಯತೆ |
| 30.7.08 | ಹಿಂದಿನ ದಿನದ ತರಬೇತಿಯ ಮುಖ್ಯಾಂಶಗಳನ್ನು ವಿಶ್ಲೇಷಿಸುವುದು | ಚಿಣ್ಣರ ಅಂಗಳ ಕೇಂದ್ರದಲ್ಲಿ ಆಯೋಜಿಸ ಬೇಕಾದ ಸಾಂಸ್ಕೃತಿಕ ಕಾರ್ಯಕ್ರಮಗಳ ಅಭ್ಯಾಸ | ಟೀ ವಿರಾಮ | ಪಠ್ಯ ವಿಷಯಗಳ ಬೋಧನೆಗೆ ಮಾದರಿಗಳನ್ನು ತಯಾರಿಸುವುದು | ಊಟದ ವಿರಾಮ | ತಯಾರಿಸಿದ ಟಿ.ಎಲ್.ಎಂ.ಗಳ ಬಳಕೆಯ ಪರಿಚಯ ಮಾಡಿಕೊಡುವುದು | ಟೀ ವಿರಾಮ | ಆಂಗ್ಲ ಭಾಷೆಯಲ್ಲಿನ ಪದ್ಯ ಮತ್ತು ಭಾಷಾ ಆಟಗಳ ಪರಿಚಯ ಮಾಡಿಕೊಡುವುದು. |

**ಚಟುವಟಿಕೆ:** ಶಿಬಿರಾರ್ಥಿಗಳನ್ನು ಗುಂಪುಗಳನ್ನಾಗಿ ವಿಂಗಡಿಸಿ, ಪ್ರತಿಯೊಂದು ಗುಂಪಿನಿಂದ ಟಿ.ಎಲ್.ಎಂ.ಗಳ ಬಳಕೆ ಮತ್ತು ತಯಾರಿಕೆಯ ಬಗ್ಗೆ ಅಭಿಪ್ರಾಯ ಸಂಗ್ರಹಿಸಿ ವಿಷಯ ಮಂಡನೆಗೆ ಅವಕಾಶ ನೀಡಲಾಗುವುದು.

ಹೀಗೆ ನಾವು ಹಗಲು ಗನಸು ಕೃತಿಯ ತಂತ್ರಾಂಶಗಳನ್ನು ತರಗತಿಯ ಸನ್ನವೇಶ ಹಾಗೂ ತರಗತಿಯ ಹೊರಗೆ ಶಿಕ್ಷಕರು ಬಳಸಿಕೊಂಡು ಮಗು ಸಹಜ ಸನ್ನವೇಶದಲ್ಲಿ ಉಲ್ಲಾಸಭರಿತವಾಗಿ ಕಲಿಯಬಹುದು.

**ದಿವಾಸ್ವಪ್ನ** ದೊಂದಿಗೆ ಗೀಜುಭಾಯಿ ಅವರ ಸಮಗ್ರ ಶಿಕ್ಷಣ ಸಾಹಿತ್ಯದ ವ್ಯಾಪಕ ಪ್ರಸಾರದ ಬಗೆಗಿನ ಅವರ ಕನಸು ಇಂದು ನನಸಾಗುವ ಹಂತಕ್ಕೆ ತಲುಪಿದೆ.

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು ನಗರ ಜಿಲ್ಲೆ, ರಾಜರಾಜೇಶ್ವರಿ ನಗರ, ಬೆಂಗಳೂರು 98.

**ಚಟುವಟಿಕೆ–4(2)**

**" ತಾರೆ ಜಮೀನ್ ಪರ್ "** ಚಲನ ಚಿತ್ರದ ವಿಶೇಷಣೆ

" ವ್ಯಕ್ತಿಯ ಶಕ್ತಿ ಸಾಮರ್ಥ್ಯಗಳ ಸ್ವಾಭಾವಿಕ ಪ್ರಗತಿಪರ ಸಾಮರಸ್ಯಯುತ ಬೆಳವಣಿಗೆಯೇ ಶಿಕ್ಷಣ". ಅದರಂತೆ ಈಗಿನ ವರ್ತಮಾನದ ಉದ್ದೇಶದಿಂದ ಮಗುವಿನ ಸರ್ವತೋಮುಖ ಬೆಳವಣಿಗೆಗಾಗಿ ಮಗುವಿನ ಜನ್ಮಜಾತ ಸಾಮರ್ಥ್ಯಗಳನ್ನು ಬೆಳೆಸುವುದು ಶಿಕ್ಷಣದ ಮುಖ್ಯ ಗುರಿಯಾಗಬೇಕು, ಹೀಗೆ ಶಿಕ್ಷಣ ಎಂದರೆ ಹಲವಾರು ರೀತಿಯಲ್ಲಿ ನಾವು ವ್ಯಾಖ್ಯಾನಿಸುತ್ತೇವೆ. ಇನ್ನೊ ನಾವು ಶಿಕ್ಷಣದ ಅರ್ಥವನ್ನು ತಿಳಿಸಲು ಆಳವಾಗಿ ಯೋಚಿಸಿದಾಗ ಎರಡು ಮೂಲಗಳು ನಮಗೆ ಗೋಚರವಾಗುತ್ತವೆ. ಒಂದು ಮನೋವೈಜ್ಞಾನಿಕವಾದದ್ದು ಇನ್ನೊಂದು ಸಾಮಾಜಿಕವಾದುದು, ಇದರಲ್ಲಿ ಮನೋವೈಜ್ಞಾನಿಕ ಭಾಗವು ಮಗುವಿನ ಆಸಕ್ತಿ, ತುಡಿತಗಳ ಅಂತರ್ ಶಕ್ತಿ ಇವುಗಳಿಗೆ ಸಂಬಂದಿಸುವುದು ಆಗಿದೆ, ಶಿಕ್ಷಣದ ಸಾಮಾಜಿಕ ಮುಖವು ಮಗುವಿನ ವ್ಯಕ್ತಿತ್ವವನ್ನು ರೊಪಿಸುವಲ್ಲಿ ಸನ್ನಿವೇಶಗಳು ಪ್ರಭಾವ ಬೀರುತ್ತವೆ, ಒಟ್ಟಾರೆಯಾಗಿ ಮಗುವಿನ ಜನ್ಮಜಾತ ಸಾಮರ್ಥ್ಯಗಳು ಹಾಗು ಸಾಮಾಜಿಕ ಅವಶ್ಯಕತೆಗಳ ನಡುವೆ ಸಂಬಂದ ಕಲ್ಪಿಸುವ ಸೇತುವೆಯೇ ಶಿಕ್ಷಣ. ಈ ಮೇಲಿನ ಹಿನ್ನೆಲೆಗಳನ್ನು ಆಧರಿಸಿ ರಚಿಸಿದ ಮಗುವಿನ ಮನೋವೈಜ್ಞಾನಿಕ ಮತ್ತು ಸಾಮಾಜಿಕ ಪರಿಸರದ ಪ್ರಭಾವವನ್ನು ಪ್ರತಿಬಿಂಬಿಸುವ ಒಂದು ಉತ್ತಮ ಚಲನಚಿತ್ರ **"ತಾರೆ ಜಮೀನ್ ಪರ್"**.

ಈ ಚಲನಚಿತ್ರದಲ್ಲಿ ಮುಖ್ಯವಾಗಿ ಮಗುವಿನ ಜನ್ಮಜಾತ ಸಾಮರ್ಥ್ಯಗಳನ್ನು ಪ್ರೇರೇಪಿಸಿ, ಪೋಷಿಸಿ ಬೆಳೆಸಲಾದ ಹಾಗೂ ಆಮೂಲಕ ಕಲಿಕೆಯಲ್ಲಿ ಪ್ರಗತಿ ಕಾಣುವ ಸನ್ನಿವೇಶ ಅತ್ಯುತ್ತಮವಾಗಿ ಮೂಡಿಬಂದಿದೆ, ಈ ಚಲನಚಿತ್ರದಲ್ಲಿ ಗಮನಿಸಿದ **ಮನೋವೈಜ್ಞಾನಿಕ ಹಾಗೂ ಸಾಮಾಜಿಕ ಅಂಶಗಳು** ಈ ಕೆಳಕಂಡಂತಿವೆ.

1. ಸದಾ ಚಟುವಟಿಕೆಯಿಂದ ಕೂಡಿದ ಕಲ್ಪನಾ ಲೋಕದಲ್ಲಿ ವಿಹರಿಸುವ ಕನಸಿನ ಕಣ್ಣುಗಳ ತುಂಟ ಮಗು, ಆದರೆ ಕಲಿಕೆಯಲ್ಲಿ ಮಾತ್ರ ಹಿಂದುಳಿದಿದ್ದು ಇಂತಹ ಮಗುವನ್ನು ತಂದೆ ತಾಯಿ, ಗುರುಗಳು, ಗೆಳೆಯರು ದಡ್ಡನೆಂದು **ಮಾನಸಿಕ ಅಸ್ವಸ್ಥನೆಂದು** ಪರಿಗಣಿಸಿರುತ್ತಾರೆ.
2. ಆದರೆ ಪೋಷಕರು ಮಗುವಿನ ಸಾಮರ್ಥ್ಯ ಮತ್ತು ಆಸಕ್ತಿಯನ್ನು ಗುರುತಿಸಿ ಆ ದಿಸೆಯಲ್ಲಿ ಆ ಮಗುವಿಗೆ ಪ್ರೋತ್ಸಾಹ ಮತ್ತು ಅವನಲ್ಲಿರುವ ಪ್ರತಿಭೆಯನ್ನು ಪೋಷಿಸುವ ಕಾರ್ಯವನ್ನು ನಿರ್ವಹಿಸಬೇಕು, ವಿದ್ಯಾಭ್ಯಾಸ ಹಾಗೂ ಸಾಕಷ್ಟು ತಿಳುವಳಿಕೆಯನ್ನು ಹೊಂದಿದ್ದ ಪೋಷಕರಾಗಿದ್ದರೂ ಸಹ, ಮಗುವಿನ ಪ್ರತಿಭೆಯನ್ನು ಗುರುತಿಸಿ, ಪ್ರೇರಣೆ ನೀಡದೆ, ತಮ್ಮ ಅಪೇಕ್ಷೆ ಹಾಗೂ ನಿರೀಕ್ಷೆಯಂತೆ, ಮಗು ಕಲಿಯ ಬೇಕು ಎನ್ನುವ ಹಂಬಲವನ್ನು ವ್ಯಕ್ತಪಡಿಸುತ್ತಾರೆ. ಇದರಿಂದ ಮಗುವಿನ ಸುಪ್ತ ಪ್ರತಿಭೆಯನ್ನು ಕಡೆಗಣಿಸುವುದರಿಂದ ಮಗು ಸ್ವಾಭಾವಿಕವಾಗಿಯೇ ಕಲಿಕೆಯಲ್ಲಿ ಹಿಂದುಳಿಯುತ್ತದೆ.
3. ಶಿಕ್ಷಕರು ಸಹಿತ ಮಗುವಿನ ಬಗ್ಗೆ ವೈಯುಕ್ತಿಕ ಕಾಳಜಿ ವಹಿಸದೆ ಇರುವುದರಿಂದ ಮಗು ಒಂಟಿತನ, ಮಾನಸಿಕ ಖಿನ್ನತೆ, ಭಯವನ್ನು ಮೈಗೂಡಿಸಿಕೊಳ್ಳಲು ಪ್ರಾರಂಭಿಸುತ್ತದೆ.
4. ಆದರೆ ಮಗುವಿನಲ್ಲಿ ಇರುವ ಕುತೂಹಲ, ಸ್ನೇಹಪರತೆ, ಸಂಗ್ರಹಣಾ ಮನೋಭಾವ, ಸತ್ಯ, ನೇರ ವ್ಯಕ್ತಿತ್ವ, ಚಿತ್ರ ಬಿಡಿಸುವಲ್ಲಿ ಆಸಕ್ತಿ, ಮುಗ್ಧತೆ, ಪರಿಸರ ಪ್ರೇಮ, ಪ್ರಾಮಾಣಿಕತನ, ಅನ್ವೇಷಣಾ ಮನೋಭಾವ, ಪ್ರಯೋಗಶೀಲ ಗುಣ, ಸಹಕಾರ ಮನೋಭಾವ, ಇವೆಲ್ಲವುಗಳನ್ನು ತಂದೆ–ತಾಯಿಗಳು ಹಾಗೂ ಶಿಕ್ಷಕರು ಗುರ್ತಿಸಿ, ಪ್ರೇರೇಪಿಸಿದ್ದಿದಾದರೆ, ಮಗು ತನ್ನಲ್ಲಿರುವ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸಿಕೊಂಡು ಎಲ್ಲರಂತೆ ಬದುಕಲು ಸಮರ್ಥ್ಯನಾಗುತ್ತಾನೆ.
5. ಮಗುವಿಗೆ ಮೇಲಿನ ಗುಣಗಳನ್ನು ಪೋಷಿಸುವುದರ ಜೊತೆಗೆ ಕಲಿಕೆಯಲ್ಲಿ ಹಿಂದುಳಿದಿರುವುದರ ಕುರಿತು ನೇರವಾಗಿ ವ್ಯಕ್ತಪಡಿಸದೆ ಮೊದಲು ಅವನ ಕೌಟುಂಬಿಕ ಹಿನ್ನಲೆ, ಪರಿಸರ ಹಾಗೂ ಹವ್ಯಾಸಗಳ ಬಗ್ಗೆ ತಿಳಿದುಕೊಳ್ಳವುದು ಅವಶ್ಯಕ.
6. ಶಿಕ್ಷಕರಾದವರು ಕಲಿಕೆಯಲ್ಲಿ ಹಿಂದುಳಿದಿರುವ ಮಗುವಿಗೆ ತೋರಿಸಿದ ವೈಯುಕ್ತಿಕ ಕಾಳಜಿ, ಮಗುವಿನ ಸುಪ್ತ ಪ್ರತಿಭೆಗೆ ನೀಡಿದ ಪ್ರೇರಣೆ, ಶಿಕ್ಷಕ ಮಗುವಿನಲ್ಲಿ ತುಂಬಿದ ಆತ್ಮ ವಿಶ್ವಾಸ, ಮಗುವಿನ ಬಗ್ಗೆ ತೋರಿದ ಪ್ರೀತಿ ಮಗುವನ್ನು ಅವನಲ್ಲಿರುವ ಪ್ರತಿಭೆಯೊಂದಿಗೆ ಕಲಿಕೆಯಲ್ಲಿ ಸುಧಾರಣೆಯನ್ನು ಕಾಣಲು ಸಾಧ್ಯವಾಗುತ್ತದೆ.

7. ಶಿಕ್ಷಕರು ಹಾಗೂ ತಂದೆ ತಾಯಿಗಳು ಮಕ್ಕಳಲ್ಲಿ ಭೇದ ಭಾವ, ಮಾಡದೇ ಸಮಾನತೆಯ ದೃಷ್ಟಿಯಿಂದ, ಅವರವರ ಸಾಮರ್ಥ್ಯಕ್ಕನುಗುಣವಾಗಿ ಬೆಳೆಸಲು ಅವಕಾಶವನ್ನು ಕಲ್ಪಿಸಬೇಕು.
8. ಶಾಲೆಯಲ್ಲಿ ಶಿಕ್ಷಕರು ಸಹಿತ ಕಲಿಕೆಯಲ್ಲಿ ಹಿಂದಿರುವ ಮಗುವಿಗೆ ನಿರ್ಲಕ್ಷ್ಯಭಾವನೆ ತೋರದೆ ವೈಯುಕ್ತಿಕ ಗಮನ ಹರಿಸಿ, ಕಲಿಕೆಯಲ್ಲಿ ಅವನಿಗಿರುವ ಗೊಂದಲವನ್ನು ಗುರುತುಸಿ ಅದಕ್ಕೆ ಸೂಕ್ತ ಕಲಿಕಾ ವಾತಾವರಣ, ಆತ್ಮ ವಿಶ್ವಾಸ, ಪ್ರೀತಿ, ಪ್ರೇರಣೆ, ನೀಡುವುದರ್ತಿಂದ ' ಮಗುವಿನಲ್ಲಿ ಉತ್ತಮ ಕಲಿಕೆಯನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ.
9. ಯಾವುದೇ ಮಗುವನ್ನು ಆಳವಾಗಿ ಗಮನಿಸಿದೆ ಮಾನಸಿಕ ಅಸ್ವಸ್ಥ ನೆಂದು ಕಾರಣವಿಲ್ಲದೆ ಪರಿಗಣಿಸಿ ವಿಶೇಷ ಶಾಲೆಗೆ ಸೇರಿಸುವಂತೆ ಮಾರ್ಗದರ್ಶನ ನೀಡುವುದು ಶಿಕ್ಷಕರ ನಿರ್ಲಕ್ಷ್ಯ ಮನೋಭಾವವನ್ನು ತೋರಿಸುತ್ತಾದೆ. ಶಿಕ್ಷಕರಾದವರು ಶಿಕ್ಷಣ ಎಂಬ ಪದವೇ ಹೇಳುವಂತೆ ಸಹನೆ, ತಾಳ್ಮೆ, ಸಹಕಾರ ಮನೋಭಾವ ಹೊಂದಿದ್ದು, ಇಂತಹ ಮಕ್ಕಳಲ್ಲಿ ಆತ್ಮ ವಿಶ್ವಾಸದ ಚಿಲುಮೆಯನ್ನು ಚಿಮ್ಮಿಸುವುದರ ಮೂಲಕ ಮಗುವಿನಲ್ಲಿರುವ ಜನ್ಮಜಾತ ಸಾಮರ್ಥ್ಯವನ್ನು, ಪ್ರತಿಭೆಯನ್ನು ಮನಪೂರ್ವಕವಾಗಿ ಮಾಡುವುದರ ಮೂಲಕ ನಮ್ಮ ಶಿಕ್ಷಣದ ಗುಣಮಟ್ಟದಲ್ಲಿ ನಿರೀಕ್ಷಿತ ಸಾಧನೆಯನ್ನು ಬದಲಾವಣೆಯನ್ನು ತರಲು ಸಾಧ್ಯವಾಗುತ್ತದೆ.
10. ಆ ಪ್ರಜ್ಞಾವಂತ ಶಿಕ್ಷಕ ಮಕ್ಕಳಿಗೆ ಮೆಚ್ಚುಗೆಯಾಗುವಂತಹ ರೀತಿಯಲ್ಲಿ ಹಾಡು, ನೃತ್ಯ, ಹಾಗೂ ವಿಭಿನ್ನ ರೀತಿಯ ಕಲಿಕೋಪಕರಣಗಳನ್ನು ಬಳಸಿ ನೀಡಿದ ಶಿಕ್ಷಣ ಅಂತಹ ಮಗುವಿನಲ್ಲಿ ಹೊಸ ಚೇತನವನ್ನು ತುಂಬಲು ಸಹಕಾರಿಯಾಗುತ್ತದೆ.

**"ತಾರೆ ಜಮೀನ್ ಪರ್"** ನಮ್ಮ ಶಿಕ್ಷಕರಿಗೆ ಒಂದು ಮಾದರಿಯಾದ ಶೈಕ್ಷಣಿಕ ಚಲನಚಿತ್ರ, ಈ ಚಲನಚಿತ್ರವನ್ನು ನಾನು ನಮ್ಮ ಡಯಟ್ ಸಂಸ್ಥೆಯಲ್ಲಿ ಡಿ.ಇಡಿ. ವಿದ್ಯಾರ್ಥಿಗಳೊಡನೆ ಚಲನಚಿತ್ರವನ್ನು ವೀಕ್ಷಿಸಿ ಚಿತ್ರದ ಬಗ್ಗೆ ನನ್ನ ಭಾವನೆಗಳನ್ನು ವ್ಯಕ್ತಪಡಿಸಿದ್ದೇನೆ.

## COMPETENCIES OF DIET FUNCTIONARIES

***ಚಟುವಟಿಕೆ–1***

ಡಿ.ಎಸ್.ಇ.ಆರ್.ಟಿ. ವೆಬ್‌ಸೈಟ್‌ನಲ್ಲಿರುವ ಶಿಕ್ಷಣ ವಿಭಾಗದಲ್ಲಿರುವ ವಿಷಯಗಳ ಅಧ್ಯಾಯವನ್ನು ಗಮನಿಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಗಿದೆ.

***1. ಡಯಟ್ ವತಿಯಿಂದ ನಡೆಯುವ ತರಬೇತಿ ಕಾರ್ಯಕ್ರಮಗಳ ಪಟ್ಟಿಯಲ್ಲಿ ಎರಡು ಕಾರ್ಯಕ್ರಮಗಳನ್ನು ಆಯ್ದುಕೊಂಡು ತರಬೇತಿಯನ್ನು ಅನುಷ್ಠಾನಗೊಳಿಸಲು ಡಯಟ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಇರಬೇಕಾದ ಸಾಮರ್ಥ್ಯ.***

ತರಬೇತಿ ಕಾರ್ಯಕ್ರಮಗಳನ್ನು ಪರಿಶೀಲಿಸಿ ಅವುಗಳಲ್ಲಿ ಎರಡು ತರಬೇತಿಗಳನ್ನು ಆಯ್ದುಕೊಳ್ಳಲಾಗಿದೆ. ಅದರಲ್ಲಿ ಕ್ರಿಯಾಸಂಶೋಧನೆ ಮತ್ತು ಆಂಗ್ಲ ಭಾಷಾ ತರಬೇತಿ. ಈ ಕಾರ್ಯಕ್ರಮಗಳನ್ನು ಆಯೋಜಿಸುವವರು ಕೆಲವು ನಿರ್ದಿಷ್ಟವಾದ ಸಾಮರ್ಥ್ಯಗಳನ್ನು ಹೊಂದಿರಬೇಕಾಗುತ್ತದೆ.

**I ಕ್ರಿಯಾ ಸಂಶೋಧನೆ**

ಕ್ರಿಯಾ ಸಂಶೋಧನೆ ತರಬೇತಿಯನ್ನು ಆಯೋಜಿಸುವವರಿಗೆ ಇರಬೇಕಾದ ಸಾಮರ್ಥ್ಯಗಳು.

1) ಕ್ರಿಯಾಸಂಶೋಧನೆಯ ಕುರಿತು ವಿಷಯ ಪ್ರಭುತ್ವ ಇರಬೇಕು.
2) ತರಬೇತಿಗಳನ್ನು ಆಯೋಜಿಸುವಾಗ ತಾತ್ವಿಕ ಅಂಶಗಳನ್ನು ವಿವರಿಸುವುದರ ಜೊತೆಗೆ ತಾತ್ವಿಕ ಅಂಶಗಳಿಗೆ ಉದಾಹರಣೆ ನೀಡುವುದರ ಮೂಲಕ ಸ್ಪಷ್ಟೀಕರಣ ನೀಡಬೇಕು.
3) ಕ್ರಿಯಾಸಂಶೋಧನೆಯಲ್ಲಿ ಬರುವಂತಹ ಪ್ರಮುಖ ಅಂಶ ಸಮಸ್ಯೆಯನ್ನು ನಿರ್ದಿಷ್ಟಗೊಳಿಸುವುದು ಮತ್ತು ಕಂಡುಕೊಂಡ ಮಾಹಿತಿ ಹಾಗೂ ಫಲಿತಾಂಶಗಳನ್ನು ವಿಶ್ಲೇಷಿಸುವುದು.
4) ಈ ವಿಶ್ಲೇಷಣಾ ಸಾಮರ್ಥ್ಯವನ್ನು ತಿಳಿಸುವ ನಿಟ್ಟಿನಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಸವಿವರವಾದ ವಿಶ್ಲೇಷಣೆಯನ್ನು ಕೈಗೊಳ್ಳುವ ಸಾಮರ್ಥ್ಯವಿರಬೇಕು.
5) ಅದರಂತೆ ಕಂಡುಕೊಂಡ ಕ್ರಿಯಾಸಂಶೋಧನೆಯ ಫಲಿತಾಂಶವನ್ನು ವರದಿಯ ರೂಪದಲ್ಲಿ ಮಂಡಿಸುವ ಸಾಮರ್ಥ್ಯವಿರಬೇಕು.

ಒಟ್ಟಾರೆಯಾಗಿ ಒಂದು ಕ್ರಿಯಾಸಂಶೋಧನೆ ಎನ್ನುವ ವಿಷಯದ ಕುರಿತು ತರಬೇತಿಯನ್ನು ಆಯೋಜಿಸುವಾಗ ಕ್ರಿಯಾಸಂಶೋಧನೆ, ಕ್ರಿಯಾಸಂಶೋಧನೆಯ ವಿಧ, ತರಗತಿಯಲ್ಲಿ ಸಂಶೋಧನೆಯ ಅವಶ್ಯಕತೆ, ಅದರ ಹಂತಗಳು ಇವೆಲ್ಲವುಗಳನ್ನು ಕ್ರಮಬದ್ಧವಾಗಿ ವ್ಯವಸ್ಥಿತವಾಗಿ ಆಯೋಜಿಸಿಕೊಳ್ಳುವ ಸಾಮರ್ಥ್ಯವಿರಬೇಕು. ಕೇವಲ ತಾತ್ವಿಕ ಅಂಶಗಳನ್ನು ಮಾತ್ರ ನೀಡದೇ ಪ್ರಾಯೋಗಿಕವಾಗಿ ಅಂಕಿಅಂಶಗಳ ಸಹಿತ ಕ್ರಿಯಾಸಂಶೋಧನೆಯನ್ನು ಕೈಗೊಂಡು ನೀಡಿದ ವರದಿಯ ಪ್ರತಿಗಳನ್ನು ತರಬೇತಿಯಲ್ಲಿ ಬಳಸಿಕೊಂಡು ವಿಷಯವನ್ನು ಮಂಡಿಸುವ ಸಾಮರ್ಥ್ಯ ಹೊಂದಿರಬೇಕು.

**2) ಇಂಗ್ಲಿಷ್ ಭಾಷಾ ತರಬೇತಿ :**

ಇಂಗ್ಲಿಷ್ ಭಾಷಾ ತರಬೇತಿಯನ್ನು ಆಯೋಜಿಸುವಾಗ ತರಬೇತಿಯನ್ನು ನಡೆಸುವವರು ಕೆಲವು ಸಾಮರ್ಥ್ಯಗಳನ್ನು ಬಳಕೆ ಮಾಡಿಕೊಳ್ಳಬೇಕು. ಅವುಗಳೆಂದರೆ.

1) ತರಬೇತಿಯನ್ನು ಆಯೋಜಿಸುವವರು ಇಂಗ್ಲಿಷ್ ಭಾಷೆಯ ಪ್ರಭುತ್ವವನ್ನು ಹೊಂದಿರಬೇಕು.
2) ತರಬೇತಿಯ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸುವುದರ ಜೊತೆಗೆ ತರಬೇತಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು.
3) ಶಿಕ್ಷಕರ ಅಗತ್ಯತೆಯನ್ನ ಆಧರಿಸಿ ತರಬೇತಿಯ ವಿನ್ಯಾಸವನ್ನು ರೂಪಿಸಿಕೊಳ್ಳಬೇಕು.
4) ತರಬೇತಿಯ ಅವಧಿಯಲ್ಲಿ ವಿಷಯಗಳನ್ನು ತಿಳಿಸುವ ಹಂತದಲ್ಲಿ ಸಂಪನ್ಮೂಲ ವ್ಯಕ್ತಿಗಳು ಆಧುನಿಕ ತಂತ್ರಜ್ಞಾನವನ್ನು ಅಳವಡಿಕೊಳ್ಳುವಂತದಹ ಜ್ಞಾನವನ್ನು ಹೊಂದಿರಬೇಕು.
5) ಚಟುವಟಿಕೆ ಆಧಾರಿತವಾಗಿ ತರಬೇತಿಯನ್ನು ಆಯೋಜಿಸಬೇಕು. (ಇಂಗ್ಲಿಷ್ ಭಾಷೆಯು ಅನ್ಯ ಭಾಷೆಯಾಗಿರುವುದರಿಂದ ನಾವು ಅದನ್ನು ಹೆಚ್ಚಿಗೆ ದಿನನಿತ್ಯ ಬಳಸದೆ ಇರುವುದರಿಂದ) ಈ ತರಬೇತಿಯನ್ನು ಚಟುವಟಿಕೆ ಆಧಾರಿತವಾಗಿ ರೂಪಿಸಿಕೊಂಡು ತರಬೇತಿ ಪಡೆಯುವವನ ಭಾಗವಹಿಸುವಿಕೆಗೆ ಹೆಚ್ಚಿನ ಅವಕಾಶವನ್ನು ಒದಗಿಸಿಕೊಡಬೇಕು.
6) ತರಬೇತಿಯ ಅವಧಿಯಲ್ಲಿ ಶಿಬಿರಾರ್ಥಿಗಳು ಇಂಗ್ಲಿಷ್ ಭಾಷೆಯಲ್ಲಿ ಸಂವಹನ ನಡೆಸಬೇಕು. ಅದರಂತೆ ಶಾಲಾ ತರಗತಿಯ ಕೋಣೆಗಳಲ್ಲಿಯೂ ಸಹ ಮಕ್ಕಳ ಜೊತೆಗೆ ಆ ಬೋಧನಾ ಅವಧಿಯಲ್ಲಿ ಇಂಗ್ಲಿಷ್ ಭಾಷೆಯಲ್ಲಿಯೇ ಮಾತನಾಡುವಂತಿರಬೇಕು.

***II ಕಳೆದ ಎರಡು ವರ್ಷಗಳಿಂದ ಡಯಟ್‌ನಲ್ಲಿ ಈ ತರಬೇತಿಗಳನ್ನು ಆಯೋಜಿಸಲಾಗುತ್ತಿದೆಯೇ? ಇದರ ಬಗ್ಗೆ ನೀವು ವೀಕ್ಷಿಸಿದ ಅಂಶಗಳನ್ನು ಬರೆಯಿರಿ.***

ಡಯಟ್‌ನಲ್ಲಿ ಹಲವಾರು ತರಬೇತಿಗಳನ್ನು ಆಯೋಜಿಸಲಾಗುತ್ತಿದೆ. ಈ ತರಬೇತಿಯಲ್ಲಿ ನಾವು ಕೆಲವೊಂದು ಅಂಶಗಳನ್ನು ವೀಕ್ಷಿಸಲಾಗಿದೆ. ಅವುಗಳೆಂದರೆ

1) ಇತ್ತೀಚಿನ ತರಬೇತಿಗಳು ಹೆಚ್ಚು ಚಟುವಟಿಕೆ ಆಧಾರಿತವಾಗಿರುತ್ತವೆ.
2) ತರಬೇತಿಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ. (ಒ.ಹೆಚ್.ಪಿ. ಪವರ್‌ಪಾಯಿಂಟ್ ಇತ್ಯಾದಿ)
3) ಶಿಕ್ಷಕರ ಅಗತ್ಯತೆಯನ್ನು ಆಧರಿಸಿ ತರಬೇತಿಯನ್ನು ಆಯೋಜಿಸಲಾಗುತ್ತಿದೆ.
4) ತರಬೇತಿಯಲ್ಲಿ ಸಾಹಿತ್ಯವನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ.
5) ಶೈಕ್ಷಣಿಕ ಕಾರ್ಯಚಟುವಟಿಕೆಗಳಿಗೆ ತೊಂದರೆಯಾಗದಂತೆ ಬೇಸಿಗೆ ರಜಾ ಅವಧಿಯಲ್ಲಿ ತರಬೇತಿಯನ್ನು ಹಮ್ಮಿಕೊಳ್ಳಲಾಗುತ್ತಿದೆ.
6) ಸಂಪನ್ಮೂಲ ವ್ಯಕ್ತಿಗಳಿಗೂ ಸಹ ಅವರ ವ್ಯಕ್ತಿತ್ವ ವಿಕಸನಕ್ಕೆ ತರಬೇತಿಗಳನ್ನು ಆಯೋಜಿಸಲಾಗುತ್ತಿದೆ.
7) ತರಬೇತಿ ನಡೆದ ನಂತರ ಅದರ ಅನುಪಾಲನೆಗಾಗಿ ಡಯಟ್‌ನಲ್ಲಿ ಶಾಲಾಭೇಟಿಯನ್ನು ಹಮ್ಮಿಕೊಳ್ಳಲಾಗುತ್ತಿದೆ.

ಹೀಗೆ ತರಬೇತಿಯ ಸ್ವರೂಪ ಅದರ ಆಯೋಜನೆ, ಅನುಷ್ಠಾನದಲ್ಲಿ ಉತ್ತಮ ರೀತಿಯ ಬದಲಾವಣೆಗಳನ್ನು ಕಾಣಲಾಗುತ್ತಿದೆ.

## LINKAGES - ACADEMIC

<u>**ಚಟುವಟಿಕೆ–1**</u>

***1) ನಿಮ್ಮ ಸಹೋದ್ಯೋಗಿಗಳೊಂದಿಗೆ ಕ್ಷೇತ್ರ ಸಂಪನ್ಮೂಲ ಕೇಂದ್ರವು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯೊಂದಿಗೆ ಹೇಗೆ ಸಂಯೋಜನೆ ಹೊಂದಿರಬೇಕು? ಎಂದು ಚರ್ಚಿಸಿ ಬರೆಯಿರಿ.***

ಈ ವಿಷಯವಾಗಿ ನಮ್ಮ ಡಯಟ್‌ನಲ್ಲಿ ನಮ್ಮ ಸಹೋದ್ಯೋಗಿಗಳೊಂದಿಗೆ ಚರ್ಚಿಸಿ, ಮುಖ್ಯವಾದ ಕೆಲವೊಂದು ಅಂಶಗಳನ್ನು ಈ ಕೆಳಕಂಡತೆ ನೀಡಲಾಗಿದೆ.

1) ಡಯಟ್ ಆಯಾ ಜಿಲ್ಲೆಯ ಶೈಕ್ಷಣಿಕ ನಾಯಕತ್ವವನ್ನು ಹೊಂದಿದ್ದು, ಇಡೀ ಜಿಲ್ಲೆಯ ಶೈಕ್ಷಣಿಕ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಈ ನಿಟ್ಟಿನಲ್ಲಿ ಕ್ಷೇತ್ರ ಸಂಪನ್ಮೂಲ ಕೇಂದ್ರಗಳು ಡಯಟ್‌ನ ಅವಿಭಾಜ್ಯ ಅಂಗಗಳಂತೆ ಕರ್ತವ್ಯ ನಿರ್ವಹಿಸುವುದು ಅಗತ್ಯವಾಗಿದೆ. ಶೈಕ್ಷಣಿಕ ಗುಣಮಟ್ಟ ಸುಧಾರಣಗೆ ಸಂಬಂಧಿಸಿದಂತೆ ಡಯಟ್ ಮತ್ತು ಶಾಲೆ (ಶಿಕ್ಷಕರು) ನಡುವೆ ಸಂಪರ್ಕ ಸೇತುವೆಯೋಪಾದಿಯಲ್ಲಿ ಬಿ.ಆರ್.ಸಿ. ಗಳು ಕರ್ತವ್ಯ ನಿರ್ವಹಿಸಬೇಕು.
2) ಶೈಕ್ಷಣಿಕ ಮಾಹಿತಿಯನ್ನು ಮೇಲ್ಮುಖ ಮತ್ತು ಕೆಳಮುಖವಾಗಿ ತಲುಪಿಸುವ ಕೊಂಡಿಯಾಗಬೇಕು.
3) ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಶಿಕ್ಷಕರನ್ನು ಸಬಲೀಕರಣಗೊಳಿಸಲು ಯಾವ ಯಾವ ತರಬೇತಿಗಳ ಅಗತ್ಯವಿದೆ? ಎಷ್ಟುದಿನಗಳ ತರಬೇತಿ ಬೇಕು? ಯಾವ ಹಂತದಲ್ಲಿ ತರಬೇತಿಯನ್ನುಯ ಹಮ್ಮಿಕೊಳ್ಳಬೇಕು ಎಂಬ ವಿಷಯಗಳ ಬಗ್ಗೆ ಕ್ಷೇತ್ರ ಸಮನ್ವಯಾಧಿಕಾರಿಗಳು ಮಾಹಿತಿಯನ್ನು ಸಂಗ್ರಹಿಸಿ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯೊಂದಿಗೆ ಈ ಮಾಹಿತಿಯನ್ನು ಹಂಚಿಕೊಂಡು ಕಾರ್ಯತತ್ಪರರಾಗಬೇಕಾಗಿದೆ.
4) ಈ ಸೇವಾ ನಿರತ ತರಬೇತಿಗಳ ನಂತರ ಶಾಲೆಗಳಿಗೆ ಭೇಟಿ ನೀಡಿ ತರಬೇತಿಯ ಅನುಪಾಲನೆ ಮಾಡಿ ಹಿಮ್ಮಾಹಿತಿಯನ್ನು ಡಯಟ್‌ಗೆ ತಲುಪಿಸುವಲ್ಲಿ ಬಿ.ಆರ್.ಸಿ. ಗಳು ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ.

***2) ನೀವು ಒಬ್ಬ ಕ್ಷೇತ್ರ ಸಮಪನ್ಮೂಲ ಸಮನ್ವಯಾಧಿಕಾರಿಯೆಂದು ಊಹಿಸಿಕೊಂಡು ಕ್ಷೇತ್ರ ಸಮಪನ್ಮೂಲ ಕೇಂದ್ರಕ್ಕೆ ಸಂಬಂಧಿಸಿದ ಕಾರ್ಯಗಳಿಗೆ ಡಯಟ್‌ನಿಂದ ಹೇಗೆ ಮಾರ್ಗದರ್ಶನ ಮತ್ತು ಬೆಂಬಲವನ್ನು ನಿರೀಕ್ಷಿಸುತ್ತಿರಿ ಎಂಬುದನ್ನು ಬರೆಯಿರಿ.***

1) ಕ್ಷೇತ್ರ ಸಮನ್ವಯಾಧಿಕಾರಿಯು ಡಯಟ್‌ನ ಒಂದು ಅವಿಭಾಜ್ಯಯ ಅಂಗವಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಕ್ಷೇತ್ರ ಮಟ್ಟದಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಹೆಚಿಸುವ ಜವಾಬ್ಧಾರಿಯನ್ನೊಂದಿದೆ. ಈ ನಿಟ್ಟಿನಲ್ಲಿ ಬಿ.ಆರ್.ಸಿ. ಯು ಹಲವಾರು ಶೈಕ್ಷಣಿಕ ಕಾರ್ಯಚಟುವಟಿಕೆ/ತರಬೇತಿಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಇವರಿಂದ ಪಡೆದ ಹಿಮ್ಮಾಹಿತಿಯನ್ನು ಆಧರಿಸಿ, ಡಯಟ್ ಸೂಕ್ತ ಮಾರ್ಗದರ್ಶನವನ್ನು ನೀಡಬೇಕು.
2) ಇಲಾಖೆಯಲ್ಲಿ ಹಮ್ಮಿಕೊಳ್ಳಲಾಗುತ್ತಿರುವ ಹೊಸ ಹೊಸ ಯೋಜನೆಗಳು/ಕಾರ್ಯಚಟುವಟಿಕೆಗಳು/ಆವಿಷ್ಕಾರಗಳು ಇತ್ಯಾದಿ ಮಾಹಿತಿಯನ್ನು ಸಕಾಲಕ್ಕೆ ಡಯಟ್ ತನ್ನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬಿ.ಆರ್.ಸಿ. ಗಳಿಗೂ ನೀಡಬೇಕು.
3) ಬಿ.ಆರ್.ಸಿ. ಗಳ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಿ ಅಗತ್ಯವಿದ್ದರೆ ಮಾರ್ಗದರ್ಶನ ನೀಡಿ ತಿಂಗಳಿಗೊಮ್ಮೆ ಪ್ರಗತಿ ಪರಿಶೀಲನಾ ಸಭೆ ನಡೆಸಬೇಕು.
4) ಬಿ.ಆರ್.ಸಿ. ಗಳಿಗೆ ಕಾರ್ಯಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಗತ್ಯವಾದ ಅನುದಾನವನ್ನು ಸಕಾಲದಲ್ಲಿ ಬಿಡುಗಡೆ ಮಾಡಬೇಕು.
5) ಬಿ.ಆರ್.ಸಿ. ಗಳಿಗೆ ಕಾಲಕಾಲಕ್ಕೆ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ತರಬೇತಿ/ಕಾರ್ಯಾಗಾರವನ್ನು ಡಯಟ್ ಹಮ್ಮಿಕೊಳ್ಳಬೇಕು.
6) ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಸಂಪನ್ಮೂಲ ವ್ಯಕ್ತಿಗಳ ಪಟ್ಟಿಯನ್ನು ಡಯಟ್ ಹೊಂದಿದ್ದು, ಈ ಸಂಪನ್ಮೂಲ ವ್ಯಕ್ತಿಗಳನ್ನು ಸಂದರ್ಭೋಚಿತವಾಗಿ ಬಳಸಿಕೊಳ್ಳಲು ಬಿ.ಆರ್.ಸಿ. ಗಳಿಗೆ ಅವಕಾಶ ನೀಡಬೇಕು.
7) ಶಾಲಾ ಭೇಟಿ, ಬೋಧನಾ ಕಲಿಕಾ ಪ್ರಕ್ರಿಯೆಯ ವೀಕ್ಷಣೆ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಡಯಟ್ ಹಂತದಲ್ಲಿ ನಿಗದಿತ ನಮೂನೆಯನ್ನು ಸಿದ್ಧಪಡಿಸಿ ಬಿ.ಆರ್.ಸಿ. ಗಳಿಗೆ ನೀಡಿ ಜಿಲ್ಲೆಯ ಶೈಕಣಿಕ ಕಾರ್ಯಚಟುವಟಿಕೆಗಳಲ್ಲಿ ಏಕರೂಪತೆಯನ್ನು ತರಬೇಕು.

***3) ಸಮೂಹ ಸಂಪನ್ಮೂಲ ವ್ಯಕ್ತಿಯು ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ಹೇಗೆ ನಿರ್ವಹಿಸಬೇಕೆಂದು ನೀವು ನಿರೀಕ್ಷಿಸುತ್ತೀರಿ?***

1) ಒಬ್ಬ ಸಿ.ಆರ್.ಪಿ. ಯು ತನ್ನ ಸಮೂಹದ ಶಾಲೆಗಳ ಭೌತಿಕ ಮತ್ತು ಶೈಕ್ಷಣಿಕ ಸ್ಥಿತಿಯ ಬಗ್ಗೆ ಅರಿವನ್ನು ಹೊಂದಿರಬೇಕು.
2) ತನ್ನ ಸಮೂಹದ ಶಿಕ್ಷಕರಿಗೆ ಶೈಕ್ಷಣಿಕ ಮಾರ್ಗದರ್ಶನವನ್ನು ನೀಡುವ ಸಾಮರ್ಥ್ಯವನ್ನು ಹೊಂದಿರಬೇಕು.
3) ಪ್ರಾಥಮಿಕ ಶಾಲಾ ಪಠ್ಯವಸ್ತುವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ ಪ್ರತೀ ತರಗತಿ/ವಿಷಯಗಳ ಸಾಮರ್ಥ್ಯಗಳನ್ನು ಅರ್ಥಮಾಡಿಕೊಂಡಿರಬೇಕು. ಈ ಸಾಮರ್ಥ್ಯಗಳನ್ನು ಮಕ್ಕಳಲ್ಲಿ ಬೆಳೆಸಲು ಸಹಾಯಕವಾಗುವಂತಹ ಚಟುವಟಿಕೆಗಳು ಮತ್ತು ಬೋಧನಾ ಕಲಿಕೋಪಕರಣಗಳ ಬಗ್ಗೆ ಚಿಂತನೆ ನಡೆಸಬೇಕು.
4) ತಾನೆ ಸ್ವತಃ ಕ್ರಿಯಾಸಂಶೋಧನೆಯನ್ನು ಕೈಗೊಂಡು ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಕಂಡುಬರುವ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಬೇಕು.
5) ಒಬ್ಬ ಮಾದರಿ ಶಿಕ್ಷಕನಿಗೆ ಇರಬೇಕಾದ ಎಲ್ಲಾ ಲಕ್ಷಣಗಳನ್ನೂ ಮೈಗೂಡಿಸಿಕೊಂಡು ತನ್ನ ಸಮೂಹದ ಶಿಕ್ಷಕರಿಗೆ ಸೂಕ್ತ ಮಾರ್ಗದರ್ಶನವನ್ನು ನೀಡಬೇಕು.

**4) ಒಬ್ಬ ಸಮೂಹ ಸಂಪನ್ಮೂಲ ವ್ಯಕ್ತಿಗೆ ಅಗತ್ಯವಾಗಿ ಇರಬೇಕಾದ ಶೈಕ್ಷಣಿಕ ಅರ್ಹತೆಗಳು ಯಾವುವು?**

1) ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಆಸಕ್ತಿ ಮತ್ತು ಬದ್ಧತೆಯನ್ನು ಹೊಂದಿದ್ದು, ಸದಾ ತನ್ನನ್ನು ಶೈಕ್ಷಣಿಕ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು.
2) ಅಧ್ಯಯನ ಶೀಲನಾಗಿದ್ದು, ಪ್ರಚಲಿತ ಜ್ಞಾನ ಸಂಪಾದನೆ ಮತ್ತು ವಿನಿಮಯದಲ್ಲಿ ಆಸಕ್ತಿಯನ್ನು ಹೊಂದಿರಬೇಕು.
3) ಶೈಕ್ಷಣಿಕ ಸಂಶೋಧನೆ/ಅಧ್ಯಯನ ಮತ್ತು ಕ್ರಿಯಾ ಸಂಶೋಧನೆಯನ್ನು ಕೈಗೊಳ್ಳುವ ಸಾಮರ್ಥ್ಯವಿರಬೇಕು.
4) ತರಗತಿಯಲ್ಲಿ ಮಾದರಿ ಪಾಠಗಳನ್ನು ನೀಡುವ ಮೂಲಕ ಶಿಕ್ಷಕರಿಗೆ ಮಾರ್ಗದರ್ಶನ ನೀಡಬೇಕು.
5) ಬೋಧನಾ ಕಲಿಕಾ ಪ್ರಕ್ರಿಯೆಗೆ ಪೂರಕವಾಗಿ ಇಲಾಖೆಯು ಸಿದ್ಧಪಡಿಸಿರುವ ಕೈಪಿಡಿ/ಸಾಹಿತ್ಯವನ್ನು ತಪ್ಪದೆ ಸಂಗ್ರಹಿಸಿ, ಅಧ್ಯಯನ ಮಾಡಿ ಕ್ಲಸ್ಟರ್ ಸಮಾಲೋಚನಾ ಸಭೆಗಳಲ್ಲಿ ಶಿಕ್ಷಕರೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳಬೇಕು.

**5) ಒಬ್ಬ ಕ್ಷೇತ್ರ ಸಮೂಹ ಸಮಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸಲು ಯಾರು ಉತ್ತಮ ವ್ಯಕ್ತಿಗಳು ಎಂಬುದನ್ನು ವಿವರಿಸಿ.**

1) ಶೈಕ್ಷಣಿಕ ಚಟುವಟಿಕೆಗಳಲ್ಲಿ ಆಸಕ್ತಿಯನ್ನು ಹೊಂದಿರಬೇಕು.
2) ಸದಾ ಅಧ್ಯಯನಶೀಲನಾಗಿರಬೇಕು.
3) ಶೈಕ್ಷಣಿಕ ಕ್ಷೇತ್ರದಲ್ಲಿ ನಾವಿನ್ಯತೆ/ಆವಿಷ್ಕಾರಗಳನ್ನು ಕೈಗೊಳ್ಳುವಂತಿರಬೇಕು.
4) ಒಬ್ಬ ಉತ್ತಮ ಶಿಕ್ಷಕನಿಗೆ ಇರಬೇಕಾದ ಎಲ್ಲಾ ಗುಣಗಳನ್ನು ಹೊಂದಿರಬೇಕು.
5) ಶಿಕ್ಷಕರು, ಪೋಷಕರು, ಸಮುದಾಯ ಮತ್ತು ಮೇಲಾಧಿಕಾರಿಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿರಬೇಕು.

## LINKAGES – ADMINISTRATIVE

**ಚಟುವಟಿಕೆ–1**

**1) ಸಿ.ಎ.ಸಿ. ಕಾರ್ಯನಿರ್ವವಹಣೆಯಲ್ಲಿ ಆದ ಅನುಭವಗಳು:**

ಡಿ.ಇಡಿ. ದಾಖಲಾತಿ ಪ್ರಕ್ರಿಯೆಗಾಗಿ ಪ್ರತಿವರ್ಷವು ಕೇಂದ್ರೀಕೃತ ದಾಖಲಾತಿ ಘಟಕದಿಂದ ಬರುವ ಮಾಹಿತಿ ಪ್ರಕಾರ ಕಾರ್ಯನಿರ್ವಹಿಸುತ್ತೇವೆ. ಈ ಕಾರ್ಯವನ್ನು ನಿರ್ವಹಿಸಲು ಡಯಟ್‌ನಲ್ಲಿ ಒಬ್ಬರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲಾಗುತ್ತದೆ. ಈ ಕಾರ್ಯದ ಯಶಸ್ವಿಗಾಗಿ ಉಪನ್ಯಾಸಕರು ಸಹಕರಿಸುತ್ತಾರೆ.

ಈ ಕಾರ್ಯದಲ್ಲಿ ದಾಖಲಾತಿ ಘಟಕದ ನಿರ್ದೇಶನದಂತೆ ಕಾರ್ಯವನ್ನು ನಿರ್ವಹಿಸಲಾಗುತ್ತದೆ. ಇಲ್ಲಿ ಕಂಡುಬಂದ ಒಂದು ಅಂಶವೇನೆಂದರೆ ವಿದ್ಯಾರ್ಥಿಗಳ ದಾಖಲಾತಿಯನ್ನು ಪಡೆಯಲು ಬ್ಯಾಂಕಿನಿಂದ ಡಯಟ್‌ಗೆ ಹಾಗೂ ಡಯಟ್‌ನಿಂದ ಬ್ಯಾಂಕಿಗೆ ಹೋಗಬೇಕಾಗುತ್ತದೆ. ಇದರ ಸಲುವಾಗಿ ವಿದ್ಯಾರ್ಥಿಗಳು, ಪೋಷಕರು ಅಸಮದಾನವನ್ನು ವ್ಯಕ್ತಪಡಿಸುತ್ತಾರೆ. ಈ ಕಾರಣದಿಂದ ಅರ್ಜಿ ಮತ್ತು ಚಲನ್ ಒಂದೇ ಕಡೆ ಕೊಡುವ ವ್ಯವಸ್ಥೆಯನ್ನು ಕಲ್ಪಿಸಬೇಕು.

ಸಿ.ಎ.ಸಿ. ಪ್ರಕ್ರಿಯೆಯನ್ನು ಕುರಿತಂತೆ ಅಂತರ್ಜಾಲದ ಮೂಲಕ ಹಂತಹಂತವಾಗಿ ಪ್ರಕಟಿಸುವಂತಿರಬೇಕು. ಇದರ ಸೂಚನೆಯನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಬೇಕು. ಏಕೆಂದರೆ ಒಬ್ಬ ವಿದ್ಯಾರ್ಥಿ ಗುಲ್ಬರ್ಗಾದವನಾಗಿದ್ದರೆ ಆ ವಿದ್ಯಾರ್ಥಿ ಮಾಹಿತಿ ತಿಳಿಯಲು ಬೆಂಗಳೂರಿಗೆ ಪ್ರತಿ ಬಾರಿಯೂ ಬರುವುದರಿಂದ ಬಹಳ ಅನಾನುಕೂಲವಾಗುತ್ತದೆ. ಆದ್ದರಿಂದ ಸಂಬಂಧಿಸಿದ ಸಂಸ್ಥೆಯು ವೆಬ್ ಮೂಲಕ ಪ್ರಕಟಿಸುವ ಸೌಲಭ್ಯವನ್ನು ಕಲ್ಪಿಸಿಕೊಡಬೇಕು.

***2) ಈ ಕಾರ್ಯದಲ್ಲಿ ಯಾವ ಸಮಸ್ಯೆಯನ್ನು ಎದುರಿಸುತ್ತಿದ್ದೀರಿ.***

ಯಾವುದೇ ಸಮಸ್ಯೆಯು ಕಂಡುಬರುತ್ತಿಲ್ಲ.

## LINKAGES – NON GOVERNAMENTAL ORGANIZATIONS

**ಚಟುವಟಿಕೆ–1**

**ಸರ್ಕಾರೇತರ ಸಂಸ್ಥೆಗಳಿಗೆ ಸಂಬಂಧಪಟ್ಟ ವೆಬ್‌ಸಯಟನ್ನು ಗಮನಿಸಿ ಎರಡು ಸಂಸ್ಥೆಗಳನ್ನು (ಎನ್.ಜಿ.ಓ.) ಆಯ್ದುಕೊಂಡು ನೀಡಿರುವ ಸಂಕ್ಷಿಪ್ತ ವಿವರ.**

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಹಾಗೂ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ನಮ್ಮ ಶಿಕಣ ಇಲಾಖೆಯು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ನಿಟ್ಟಿನಲ್ಲಿ ಕೆಲವು ಸರ್ಕಾರೇತರ ಸಂಸ್ಥೆಗಳು ಶಿಕ್ಷಣ ಇಲಾಖೆಯ ಸಹಭಾಗಿತ್ವದೊಂದಿಗೆ ಈ ಕಾರ್ಯವನ್ನು ಯಶಸ್ವಿಗೊಳಿಸಲು ಕಾರ್ಯನಿರ್ವಹಿಸುತ್ತಿವೆ. ಅಂತಹ ಎರಡು ಸಂಸ್ಥೆಗಳನ್ನು ನಾವು ಆಯ್ಕೆ ಮಾಡಿಕೊಂಡು ವರದಿಯನ್ನು ಈ ಕೆಳಕಂಡಂತೆ ನೀಡಲಾಗಿದೆ.

1) **ಅಕ್ಷರ ಪ್ರತಿಷ್ಠಾನ**
2) **ಅಜೀಂ ಪ್ರೇಂಜಿ ಪ್ರತಿಷ್ಠಾನ.**

**1) ಅಕ್ಷರ ಪ್ರತಿಷ್ಠಾನ:** ಅಕ್ಷರ ಪ್ರತಿಷ್ಠಾನವು ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ನಮ್ಮ ಶಿಕ್ಷಣ ಇಲಾಖೆಯೊಂದಿಗೆ ಯಶಸ್ವಿಗೊಳಿಸಲು ಮಾರ್ಚ್–2000 ದಲ್ಲಿ ಪ್ರಾರಂಭವಾದಂತಹ ಒಂದು ಪಬ್ಲಿಕ್ ಚಾರಿಟೆಬಲ್ ಟ್ರಸ್ಟ್. ಕರ್ನಾಟಕದಲ್ಲಿರುವ ಎಲ್ಲಾ ಶಾಲಾ ಮಕ್ಕಳು ಸರಳವಾಗಿ ಹಾಗೂ ಕೊಟ್ಟಿರುವ ವಿಷಯವನ್ನು ಸುಲಭವಾಗಿ ಓದಲು ಸಹಕಾರಿಯಾಗುವಂತಹ ಒಂದು ಉನ್ನತ ದೂರದೃಷ್ಠಿಯನ್ನು ಹೊಂದಿ ತನ್ನ ಕಾರ್ಯಕ್ರಮದ ಮೂಲಕ ಪ್ರಾರಂಭಿಸಿತು.

**1. ಓದುವ ಕಾರ್ಯಕ್ರಮ:** ಅಕ್ಷರ ಪ್ರತಿಷ್ಠಾನವು ಭಾಷಾ ಕಲಿಕೆಯ ಮೂಲಭೂತ ಕೌಶಲ್ಯಗಳಲ್ಲಿ ಒಂದಾದ ಓದುವ ಕೌಶಲ್ಯಕ್ಕೆ ಹೆಚ್ಚು ಒತ್ತನ್ನು ನೀಡಿ ಓದುವ ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಏಕೆಂದರೆ ಓದುವ ಕೌಶಲ್ಯದ ಸಹಾಯದಿಂದ ಮಾತ್ರ ಬೇರೆ ಯಾವುದೇ ಕೌಶಲ್ಯ ಮತ್ತು ಸಾಮರ್ಥ್ಯವನ್ನು ಗಳಿಸಬಹುದಾಗಿದೆ.

ಈ ಕಾರ್ಯಕ್ರಮವು ಪ್ರತಿ ಮಗು ಓದಲು ಕಲಿಯಲಿ ಎನ್ನುವ ಧ್ಯೇಯವನ್ನು ಗುರಿಯಾಗಿಸಿಕೊಂಡಿದೆ, ಪ್ರತಿ ಅರ್ಹ ಮಗುವು ಶಾಲೆಯಲ್ಲಿದ್ದು, ಗುಣಾತ್ಮಕ ಕಲಿಕೆಯನ್ನು ಹೊಂದಬೇಕಾಗಿರುವುದರಿಂದ ಓದುವುದು, ಬರೆಯುವುದು ಮತ್ರವಲ್ಲದೆ ಒಂದು ಭಾಷೆಯನ್ನು ಮಾತನಾಡುವುದರಲ್ಲಿ ಗುಣಾತ್ಮಕ ಕಲಿಕೆ ಸಾಧಿಸುವುದು ಈ ಕಾರ್ಯಕ್ರಮದ ಮುಖ್ಯಾಂಶವಾಗಿದೆ.

**ಓದುವ ಕಾರ್ಯಕ್ರಮದ ಅನುಷ್ಠಾನದ ವಿಧಾನ:**

1) ಅಕ್ಷರ ಪ್ರತಿಷ್ಠಾನವು 2003–04 ರಲ್ಲಿ ಪ್ರಥಮವಾಗಿ ಬೆಂಗಳೂರು ನಗರ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡು 02 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಓದುವ ಕಾರ್ಯಕ್ರಮವನ್ನು ಸರ್ವ ಶಿಕ್ಷಣ ಅಭಿಯಾನದ ಆರ್ಥಿಕ ಸಹಯೋಗದೊಂದಿಗೆ ಪ್ರಾರಂಭಿಸಲಾಯಿತು.
2) 2004–05 ರಲ್ಲಿ ಬೆಂಗಳೂರು ನಗರ ಜಿಲ್ಲೆಯ ದಕ್ಷಿಣ ವಲಯ–2 ಹಾಗೂ ಉತ್ತರ ವಲಯ–2 ರಲ್ಲಿರುವ 117 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಓದುವ ಕಾರ್ಯಕ್ರಮವನ್ನು ಒಟ್ಟು 4500 ಮಕ್ಕಳಿಗೆ ನಡೆಸಲಾಯಿತು.
3) 2005–06 ರಲ್ಲಿ ಬೆಂಗಳೂರು ನಗರ ಜಿಲ್ಲೆಯ ಆಯ್ದ ಶೈಕ್ಷಣಿಕ ವಲಯಗಳಾದ ಉತ್ತರ ವಲಯ–1 ಮತ್ತು 3 ಹಾಗೂ ದಕ್ಷಣಿ ವಲಯ–1 ಮತ್ತು 4 ರ ಆಯ್ದ 250 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಓದುವ ಕಾರ್ಯಕ್ರಮವನ್ನು ಆರಂಭಿಸಲಾಯಿತು.

**ಓದುವ ಕಾರ್ಯಕ್ರಮದಲ್ಲಿ ಕಥೆ ಕಾರ್ಡ್‌ಗಳ ಬಳಕೆ:**

ಓದುವ ಕಾರ್ಯಕ್ರಮದಲ್ಲಿ ಕಥೆ ಕಾರ್ಡ್‌ಗಳನ್ನು ಬಳಸಿ ಅವುಗಳನ್ನು ಒಂದು ಮಗುವಿಗೆ ದಿನಕ್ಕೆ ಒಂದು ಕಾರ್ಡಿನಂತೆ ಅಕ್ಷರ ಪ್ರತಿಷ್ಠಾನದ ವತಿಯಿಂದ ಕಾರ್ಯಕ್ರಮ ಅನುಷ್ಠಾನಗೊಂಡ ಶಾಲೆಗಳಿಗೆ ವಿತರಿಸಲಾಗಿದೆ. ಸದರಿ ಕಾರ್ಡ್‌ಗಳಲ್ಲಿ ಓದುವ ಮಾಹಿತಿ ಸರಳತೆಯಿಂದ ಸಂಕೀರ್ಣತೆಗೆ ಇರುವಂತೆ ರಚಿಸಲಾಗಿದೆ. ಮಕ್ಕಳು ಕಾರ್ಡ್‌ಗಳಲ್ಲಿರುವ ಕಥೆಗಳನ್ನು ಅತ್ಯಂತ ಆಸಕ್ತಿಯಿಂದ ಓದಿ ಅದರಲ್ಲಿರುವ ಚಿತ್ರ ಕಥಾ ಮಾಹಿತಿಯನ್ನು ಪೂರ್ಣವಾಗಿ ಗ್ರಹಿಸುತ್ತಿರುವುದು ಕಂಡುಬಂದಿದೆ.

**ಓದುವ ಹಂತಗಳು**

**O** – Ordinary level – ಅಕ್ಷರ ಗುರುತಿಸಲು ಬಾರದೇ ಇರುವವರು

**L** – Leter level – ಅಕ್ಷರಗಳನ್ನು ಗುರುತಿಸುವವರು

**W** – Word level - ಸರಳ ಪದಗಳನ್ನು ಗುರುತಿಸುವವರು.

**S** – Sentence level - ಸರಳ ವಾಕ್ಯಗಳನ್ನು ಓದುವವರು.

**P** – Paragraph level – ವಾಕ್ಯಗಳನ್ನು ನಿರರ್ಗಳವಾಗಿ ಓದುವವರ.

ಓದುವ ಕಾರ್ಯಕ್ರಮದಲ್ಲಿ ನೀಡಿದ ಓದುವ ಕಾರ್ಡ್‌ಗಳು ಹೆಚ್ಚು ಆಕರ್ಷಣೀಯವಾಗಿದ್ದು, ಉತ್ತಮವಾದಂತಹ ವಿಧಾನವಾಗಿದೆ. ಇದರ ಜೊತೆಗೆ ನೂತನ ಹಾಗೂ ಆಸಕ್ತಿದಾಯಕವಾದ **ನಗುನಗುತ ಗಣಿತ** ಎಂಬ ಕಾರ್ಯಕ್ರಮವನ್ನು ಆರಂಭಿಸಿದೆ.

**ನಗುನಗುತ ಗಣಿತ:**

ಪ್ರಾಥಮಿಕ ಶಾಲಾಮಕ್ಕಳಲ್ಲಿ ಗಣಿತವು ಕ್ಲಿಷ್ಟಕರ ವಿಷಯವೆಂದು ತಿಳಿಯಲಾಗಿದೆ. ಆದರೆ ಗಣಿತ ಕ್ಲಿಷ್ಟವಾದ ವಿಷಯವೇನಲ್ಲ. ಒಮ್ಮೆ ಮಗು ಗಣಿತದ ಮೂಲಭೂತ ಕೌಶಲ್ಯಗಳನ್ನು ಗಳಿಸಿದರೆ ಉನ್ನತ ಹಂತದಲ್ಲಿ ಗಣಿತದ ಕಲಿಕೆ ಸುಲಭವಾಗಿದೆ.

**ಈ ಕಾರ್ಯಕ್ರಮದ ಅನುಷ್ಠಾನ:**

ಗಣಿತ ವಿಷಯದ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಉತ್ತಮಗೊಳಿಸಲು ಹಾಗೂ ಅಂಕಗಣಿತದ ಮೂಲ ಕೌಶಲಗಳ ವಿಕಾಸಕ್ಕಾಗಿ ಅಕ್ಷರ ಪ್ರತಿಷ್ಠಾನವು ಸರ್ವ ಶಿಕ್ಷಣ ಅಭಿಯಾನ ನೇತೃತ್ವದಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪರಿಹಾರ ಬೋಧನಾ ಕಾರ್ಯಕ್ರಮವಾಗಿ **ನಗುನಗುತ ಗಣಿತ** ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ.

**ಗಣಿತ ಕಿಟ್:–**

**ಡಾ॥ ಪದ್ಮಿನಿ ಟಿ., ಎಮರಿಟಸ್,** ಶಿಕ್ಷಣ ಪ್ರಾಧ್ಯಾಪಕಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಇವರು ಪ್ರಾಥಮಿಕ ಶಾಲಾ ಮಕ್ಕಳ ಪ್ರಾರಂಭಿಕ ಗಣಿತ ಮೂಲ ಕೌಶಲಗಳ ಕಲಿಕೆ, ಮಾನಸಿಕ ಲೆಕ್ಕಾಚಾರ ಹಾಗೂ ಬಹುಮುಖ ಯೋಚನೆ ಇವುಗಳ ವಿಕಾಸಕ್ಕಾಗಿ ಗಣಿತ ಕಿಟ್‌ಗಳನ್ನು ಎರಡು ಹಂತಗಳಲ್ಲಿ (2.3.4 &5ನೇ ತರಗತಿಗಾಗಿ) ಅಂದರೆ ಹಂತ–1 (0–100 ವರೆಗೆ ಸಂಖ್ಯೆಗಳು). ಹಂತ–2 (100–1000 ವರೆಗಿನ ಸಂಖ್ಯೆಗಳು) ರಚಿಸಿದ್ದಾರೆ.

**ನಗುನಗುತ ಗಣಿತದ ಪ್ರಮುಖ ಸಾಮಗ್ರಿಗಳು ಮತ್ತು ಚಟುವಟಿಕೆಗಳು:**

1) ಪದ್ಮಿನಿ ಎಣಿಕೆ ಮಣೆ : **"**ಎಣಿಸಿ ಕಲಿ**"** ತತ್ವದ ಆಧಾರವುಳ್ಳ ಮೂರ್ತರೂಪದ ಚಟುವಟಿಕೆ.
2) ಸಂಖ್ಯಾ ಚೌಕಟ್ಟುಗಳು: ಸಂಖ್ಯಾವಾಚಕ ಮತ್ತು ಸಂಖ್ಯಾ ವಿನ್ಯಾಸಗಳನ್ನು ಪರಿಚಯಿಸುವ ವಿವಿಧ ರೀತಿಯ ಸಂಖ್ಯಾ ಚೌಕಟ್ಟುಗಳು ಅಭ್ಯಾಸ ಪುಸ್ತಕದೊಂದಿಗೆ ಪ್ರಾತಿನಿದ್ಯಾತ್ಮಕ ಚಟುವಟಿಕೆಗಳಿಗಾಗಿ.
3) ಗಣಿತದ ಆಟಗಳು: ವಿವಿಧ ರೀತಿಯ ಗಣಿತದ ಆಟಗಳು, ಮಾನಸಿಕ ಲೆಕ್ಕಾಚಾರದ ಕಲಿಕೆಗಾಗಿ.
4) ಮಾನಸಿಕ ಲೆಕ್ಕಾಚಾರ: ಪ್ರತಿದಿನದ ಅಭ್ಯಾಸಕ್ಕಾಗಿ (ಪ್ರಶ್ನೆ ಆಲಿಸಿ ಉತ್ತರ ಬರೆಯುವ ವಿಧಾನ).
5) ಗಣಿತದ ತಾರ್ಕಿಕತೆಯ ಚಟುವಟಿಕೆಗಳು: ಹಣ, ಸಮಯ, ಆಕೃತಿ, ಅಳತೆ ಮತ್ತು ಬಹುಮುಖ ಆಲೋಚನೆಯ ಅಭ್ಯಾಸ.

ಈ ಗಣಿತ ಕಿಟ್ಟಿನಲ್ಲಿರುವ ಸಾಮಗ್ರಿಗಳು ಹಾಗೂ ಚಟುವಟಿಕೆಗಳು ಪ್ರಾಥಮಿಕ ಶಾಲಾ ಮಕ್ಕಳಲ್ಲಿ ಗಣಿತದ ಮೂಲ ಕೌಶಲ್ಯಗಳನ್ನು ಬೆಳೆಸುವಲ್ಲಿ ಪ್ರಯೋಜನಕಾರಿಯಾಗಿದೆ. ಈ ಕಾರ್ಯಕ್ರಮವು ರಾಜ್ಯದ ಎಲ್ಲಾ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಿಗೂ ಈ ಸೌಲಭ್ಯ ದೊರೆಯುವಂತಾಗಲಿ. ಹಾಗೂ ಈ ಕಾರ್ಯಕ್ರಮ ನಗುನಗುತಾ ಸಾಗಲಿ.

**2) ಅಜೀಂ ಪ್ರೇಂಜಿ ಪ್ರತಿಷ್ಠಾನ.:**

ಈ ಪ್ರತಿಷ್ಠಾನವು 04 ಪ್ರಮುಖ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದರ ಜೊತೆಗೆ ಇನ್ನೂ ಕೆಲವು ಮಧ್ಯವರ್ತನೆಗಳ ಮೂಲಕ ಶೈಕ್ಷಣಿಕ ಗುಣಮಟ್ಟವನ್ನು ಉತ್ತಮಪಡಿಸುವಲ್ಲಿ ನಿರಂತವಾಗಿದೆ.

1) **ಪರೀಕ್ಷಾ ವ್ಯವಸ್ಥೆಯಲ್ಲಿ ಸುಧಾರಣೆ:**

**ಅ) ಎಲ್.ಜಿ.ಪಿ. (ಕಲಿಕಾ ಖಾತ್ರಿ ಕಾರ್ಯಕ್ರಮ)**

ಈ ಕಾರ್ಯಕ್ರಮದಲ್ಲಿ ದಾಖಲಾತಿ, ಹಾಜರಾತಿ ಇವುಗಳಿಂದ ಉಂಟಾದ ಕಲಿಕೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಶಿಕ್ಷಣ ವ್ಯವಸ್ಥೆಯಲ್ಲಿ ಸಾಂಪ್ರದಾಯಿಕ ಪರೀರಕ್ಷಾ ಪದ್ಧತಿ ಇದ್ದು, ಈ ಪದ್ಧತಿಯನ್ನು ಸುಧಾರಣೆ ಮಾಡಲು ಕರ್ನಾಟಕದ ಈಶಾನ್ಯ ವಲಯದಲ್ಲಿ ಪ್ರಾಯೋಗಿಕವಾಗಿ ಮೊದಲ ಹಂತದಲ್ಲಿ ಪ್ರಾರಂಭಿಸಲಾಯಿತು. ನಂತರ ಇದನ್ನು ಬೆಂಗಳೂರು ನಗರ ಜಿಲ್ಲೆಗೂ ವಿಸ್ತರಿಸಲಾಯಿತು. ಈ ಯಶಸ್ವಿ ಯೋಜನೆಯ ಆಧಾರವಾಗಿಟ್ಟುಕೊಂಡು ನಮ್ಮ ಶಿಕ್ಷಣ ಇಲಾಖೆಯು **ಕೆ.ಎಸ್.ಕ್ಯೂ.ಎ.ಒ.** ಎಂಬ ಕಾರ್ಯಕ್ರಮವನ್ನು 2004 ರಲ್ಲಿ ಪ್ರಾರಂಭಿಸಲಾಯಿತು.

ಆ) ಶಿಕ್ಷಕರನ್ನು ಉತ್ತೇಜಿಸಲು ಹಾಗೂ ಸೂಕ್ತ ಸಿದ್ಧತೆಗಳನ್ನು ಮಾಡಿಕೊಳ್ಳಲು ಈ ಪ್ರತಿಷ್ಠಾನದ ಒಂದು ವಿಭಾಗವು ಶಿಕ್ಷಕರಿಗೆ ತಯಾರಿಸಲಾಗಿರುವ ರಾಷ್ಟ್ರೀಯ ಪಠ್ಯಕ್ರಮ–2006 ಇದರಲ್ಲಿ ಸೇವಾನಿರತ ಹಾಗೂ ಸೇವಾಪೂರ್ವ ಶಿಕ್ಷಕರಿಗೆ ಇಬ್ಬರಿಗೂ ಅನುಕೂಲವಾಗುವಂತೆ ಪಠ್ಯಕ್ರಮವನ್ನು ರಚಿಸಲು ತೊಡಗಿಸಿಕೊಂಡಿರುತ್ತಾರೆ. ಇಲಾಖೆಯ ಸಹಭಾಗಿತ್ವದೊಂದಿಗೆ ಪಠ್ಯಕ್ರಮವನ್ನು ಆಯ್ಕೆಗೊಂಡ ಕೆಲವು ಸಂಸ್ಥೆಗಳಲ್ಲಿ ಪ್ರಯೋಗಾತ್ಮಕವಾಗಿ ಮಾಡಲಾಗಿದೆ.

ಇ) ಶೈಕ್ಷಣಕ ನಿರ್ವಹಣೆ: ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಯನ್ನು ಪುನರ್‌ಸಂಘಟನೆ ಮಾಡುವಂತಹ ಪ್ರಕ್ರಿಯೆಯಲ್ಲಿ ತೊಡಗಿದೆ. ಶೈಕ್ಷಣಿಕ ನಿರ್ವಹಣೆಯಲ್ಲಿ ಸಮುದಾಯದ ಪಾತ್ರ ಮತ್ತು ಅದರ ಪರಿಣಾಮಕತೆ ಹಾಗ್ಯೆ ಶೈಕ್ಷಣಿಕ ಆಡಳಿತ ನಿರ್ವಹಣೆಯಲ್ಲಿ ಮಾಹಿತಿ ತಂತ್ರಜ್ಞಾನದ ಅಳವಡಿಕೆ ಮತ್ತು ಶೈಕ್ಷಣಿಕ ಆಡಳಿತಗಾರರಿಗೆ ಶೈಕ್ಷಣಿಕ ನಿರ್ವಹಣೆ ಮತ್ತು ನಾಯಕತ್ವದ ಗುಣಗಳನ್ನು ಅಭಿವೃದ್ಧಿಪಡಿಸುವಲ್ಲಿ ಅನೇಕ ತರಬೇತಿಗಳನ್ನು ಹಮ್ಮಿಕೊಂಡಿದೆ.

ಈ) ಶಿಕ್ಷಣ ಕ್ಷೇತ್ರದಲ್ಲಿ ತಂತ್ರಜ್ಞಾನದ ಬಳಕೆ: ಗಣಕ ಯಂತ್ರವನ್ನು ಕೆಲವು ಶಾಲೆಗಳಲ್ಲಿ ಅಳವಡಿಸಿದ್ದರೂ ಕನ್ನಡ ಮಾಧ್ಯಮದಲ್ಲಿ ವಿಷಯವನ್ನು ಬೋಧೀಸಲು ಆಗುತ್ತಿರಲಿಲ್ಲ. ಈ ನಿಟ್ಟಿನಲ್ಲಿ ಪ್ರತಿಷ್ಠಾನವು ಶಿಶು ಕೇಂದ್ರಿತ ಹಾಗೂ ಕ್ಲಿಷ್ಟ ವಿಷಯಗಳನ್ನು ಆಯ್ದು **ಸಿ.ಡಿ. ಸಾಫ್ಟ್** ರೂಪದಲ್ಲಿ ಹೊರತಂದಿದ್ದು, ಈ ಸಿ.ಡಿ. ಗಳನ್ನು ಎಲ್ಲಾ ಶಾಲೆಗಳಿಗೂ ಡಿ.ಎಸ್.ಇ.ಆರ್.ಟಿ. ವತಿಯಿಂದ ವಿತರಣೆಯಾಗಿದ್ದು, ಶಾಲೆಯಲ್ಲಿ ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಉತ್ತಮವಾಗಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ.

ಉ) ಶಾಲೆಗಳಿಗೆ ಸಂಬಂಧಿಸಿದಂತೆ **ಇ.ಎಂ.ಐ.ಎಸ್**. ರಾಜ್ಯದ ಸರ್ಕಾರಿ/ಅನುದಾನಿತ ಶಾಲೆಗಳ ಪೂರ್ಣ ಮಾಹಿತಿಯನ್ನು ಬಹಳ ಸುಲಭವಾಗಿ ನಾವು ಕಂಪ್ಯೂಟರ್‌ಗಳ ಮೂಲಕ ಮಾಹಿತಿಯನ್ನು ಪಡೆಯಬಹುದಾಗಿದೆ.

ಊ) ವಲಸೆ ಮಕ್ಕಳಿಗೂ ಸಹ ಶಿಕ್ಷಣವನ್ನು ನೀಡುತ್ತಿದೆ.

ಋ) **ಚೈಲ್ಡ್ ಫ್ರೆಂಡ್ಲಿ ಸ್ಕೂಲ್** (Child Friendly School) ಮಕ್ಕಳ ಮಿತ್ರರಾಗಿ ಶಾಲೆಗಳು ಈ ಯೋಜನೆಯನ್ನು ಗುಲ್ಬರ್ಗಾ ಜಿಲ್ಲೆಯ ಸೌರಾಪುರ ಎಂಬ ಗ್ರಾಮದಲ್ಲಿ ಆರಂಭಿಸಿದೆ. ಒಂದು ಶಾಲೆಯ ಅಭಿವೃದ್ಧಿಗಾಗಿ ಅಲ್ಲಿನ ಸಮುದಾಯ, ಸ್ಥಳಿಯರ ನೆರವನ್ನು ಹೇಗೆ ಪಡೆಯಬಹುದು ಎಂಬುದರ ಆಧಾರದ ಮೇಲೇ ಶಾಲಾ ಅಭಿವೃದ್ಧಿ ಯೋಜನೆಯನ್ನು ಆಧರಿಸಿ ಶೇಖಡಾ 50 ರಷ್ಟು ಶಾಲೆಗಳಲ್ಲಿ ಈ ಯೋಜನೆಯನ್ನು ಅಳವಡಿಸಲಾಗಿದೆ.

ಹೀಗೆ ಅನೇಕ ಸರ್ಕಾರೇತರ ಸಂಸ್ಥೆಗಳು ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಹಾಗೂ ಗುಣಮಟ್ಟದ ಕಲಿಕೆಗಾಗಿ ನಮ್ಮ ಸಾರ್ವಜನಿಕ ಶಿಕ್ಷಣ ಇಲಾಖೆಯೊಂದಿಗೆ ಕೈಜೋಡಿಸಿವೆ. ಅದರಲ್ಲಿ ಎರಡು ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ.